☞ ಹಾವೇರಿ
☞ ಗದಗ
☞ ಧಾರವಾಡ
☞ ದಾವಣಗೆರೆ
☞ ಚಿತ್ರದುರ್ಗ
☞ ವಿಜಯನಗರ
☞ ಶಿವಮೊಗ್ಗ
☞ ಬಳ್ಳಾರಿ

ಸುದ್ದಿ, ಫೋಟೋ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ : 9480410207

ಪಾಂಡವ

PANDAVA Regional Kannada News Paper ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಪತ್ರಿಕೆ, ಜಾಹೀರಾತು ಇಸ್ತಿಯಾರನಾಮೆಗಳಿಗಾಗಿ ಸಂಪರ್ಕಿಸಿ : ಮೊಬೈಲ್ ನಂ. : 9742789207 7411679202

* Volume : XVII * Issue : 078 * SUNDAY 15, NOVEMBER 2026 * Editor : S.T. VEDAMURTHY * Page : 6 * Rs : 2.50 * RNI No. KARKAN/2011/39005 * PMG/KA/NK/HVR-028/2026-28 * pandavarnr@gmail.com * Mob No.: 9742789207

ಪ್ರಮುಖ ಸಂಕ್ಷಿಪ್ತ ಸುದ್ದಿ

ಕಲಾ ಪ್ರತಿಭೋತ್ಸವಕ್ಕೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಪಾಂಡವ ನ್ಯೂಸ್, ಹಾವೇರಿ : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಕ್ಕಳ ಹಾಗೂ ಯುವಜನರ ಕಲಾಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಆಯೋಜಿಸಿರುವ ಕಲಾ ಪ್ರತಿಭೋತ್ಸವ ಸ್ಪರ್ಧೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ನ.17ರವರೆಗೆ ವಿಸ್ತರಿಸಲಾಗಿದೆ.

ವಯೋಮಿತಿ ಮತ್ತು ಸ್ಪರ್ಧಾ ವಿಭಾಗಗಳು : ಬಾಲಪ್ರತಿಭೆ ವಿಭಾಗದಲ್ಲಿ 8ರಿಂದ 14 ವರ್ಷದೊಳಗಿನವರು, ಕಿಶೋರ ಪ್ರತಿಭೆ ವಿಭಾಗದಲ್ಲಿ 14ರಿಂದ 18 ವರ್ಷದೊಳಗಿನವರು ಹಾಗೂ ಯುವಪ್ರತಿಭೆ ವಿಭಾಗದಲ್ಲಿ 18ರಿಂದ 30 ವರ್ಷದೊಳಗಿನವರು ಭಾಗವಹಿಸಬಹುದು.

ಬಾಲ ಮತ್ತು ಕಿಶೋರ ಪ್ರತಿಭೆ ವಿಭಾಗಗಳಲ್ಲಿ ಶಾಸ್ತ್ರೀಯ ನೃತ್ಯ, ಸುಗಮ ಸಂಗೀತ, ಚಿತ್ರಕಲೆ, ಜಾನಪದ ಗೀತೆ, ಹಿಂದೂಸ್ತಾನಿ ಹಾಗೂ ಕರ್ನಾಟಕ ವಾದ್ಯ ಸಂಗೀತ ಮತ್ತು ಶಾಸ್ತ್ರೀಯ ಸಂಗೀತ ಸ್ಪರ್ಧೆಗಳು ನಡೆಯಲಿವೆ.ಯುವಪ್ರತಿಭೆ ವಿಭಾಗದಲ್ಲಿ ಆಶುಭಾಷಣ, ಶಾಸ್ತ್ರೀಯ ನೃತ್ಯ, ಸುಗಮ ಸಂಗೀತ, ಹಿಂದೂಸ್ತಾನಿ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತ, ಚಿತ್ರಕಲೆ, ವಾದ್ಯ ಸಂಗೀತ ಮತ್ತು ಜಾನಪದ ಗೀತೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.ಸಮೂಹ ಸ್ಪರ್ಧೆಗೂ ಅವಕಾಶ : ಸಮೂಹ ಸ್ಪರ್ಧೆಯಲ್ಲಿ ನಾಟಕ ಹಾಗೂ ಜಾನಪದ ನೃತ್ಯ ಪ್ರದರ್ಶಿಸಬಹುದು. ಒಂದು ತಂಡದಲ್ಲಿ 10ರಿಂದ 15 ಸದಸ್ಯರು ಭಾಗವಹಿಸಲು ಅವಕಾಶವಿದೆ.ಸ್ಪರ್ಧಿಗಳು ವಯಸ್ಸಿನ ದೃಢೀಕರಣಕ್ಕಾಗಿ ಶಾಲೆ ಅಥವಾ ಕಾಲೇಜಿನಿಂದ ಪಡೆದ ಪ್ರಮಾಣಪತ್ರ ಹಾಗೂ ಜನನ ಪ್ರಮಾಣಪತ್ರ ಸಲ್ಲಿಸಬೇಕು. ಸ್ಪರ್ಧೆಗೆ ಅಗತ್ಯವಿರುವ ವಾದ್ಯ ಪರಿಕರಗಳನ್ನು ಸ್ಪರ್ಧಿಗಳೇ ತರಬೇಕು. ಒಬ್ಬ ಸ್ಪರ್ಧಿಗೆ ಒಂದಕ್ಕಿಂತ ಹೆಚ್ಚು ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

ನಗದು ಬಹುಮಾನ : ಜಿಲ್ಲಾ ಮಟ್ಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರು ವಲಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಲಿದ್ದಾರೆ. ವಲಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗುತ್ತಾರೆ.ರಾಜ್ಯಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆಯುವವರಿಗೆ ಕ್ರಮವಾಗಿ 15 ಸಾವಿರ, 10 ಸಾವಿರ ಹಾಗೂ 7,500 ನಗದು ಬಹುಮಾನ ಮತ್ತು ಪ್ರಮಾಣಪತ್ರ ನೀಡಲಾಗುತ್ತದೆ. ತೀರ್ಪುಗಾರರ ನಿರ್ಧಾರವೇ ಅಂತಿಮವಾಗಿರುತ್ತದೆ.

ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ನ.17ರೊಳಗಾಗಿ ತಮ್ಮ ವಿವರಗಳೊಂದಿಗೆ ಅರ್ಜಿಯನ್ನು ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಆಡಳಿತ ಭವನ, 32, 'ಬಿ' ಬ್ಲಾಕ್, ಹಾವೇರಿ ಇಲ್ಲಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ 08375-249295 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಮನೆ ಜಾಗದ ವಿವಾದ; ವ್ಯಕ್ತಿಗೆ ಹಲ್ಲೆ, ಜೀವ ಬೆದರಿಕೆ

ಪಾಂಡವ ನ್ಯೂಸ್, ರಾಣೇಬೆನ್ನೂರು: ಮನೆ ಜಾಗದ ಹಂಚಿಕೆ ವಿಚಾರವಾಗಿ ಹಳೆಯ ವೈಷಮ್ಯ ಮತ್ತೆ ಭುಗಿಲೆದ್ದು ವ್ಯಕ್ತಿಯ ಮೇಲೆ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿರುವ ಘಟನೆ ಹುಣಸಿಕಟ್ಟಿ ರಸ್ತೆಯ ಅಯ್ಯಪ್ಪ ದೇವಸ್ಥಾನದ ಬಳಿ ನಡೆದಿದೆ.


ನ.7ರಂದು ಸಂಜೆ 6 ಗಂಟೆ ಸುಮಾರಿಗೆ ದೂರುದಾರರು ಪತ್ನಿಯೊಂದಿಗೆ ಮನೆಯ ಮುಂದೆ ಕೆಲಸ ಮಾಡುತ್ತಿದ್ದಾಗ ಆರೋಪಿಗಳು ಜಾಗದ ವಿಚಾರವಾಗಿ ಗಲಾಟೆ ಆರಂಭಿಸಿದ್ದಾರೆ. ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೈಯಿಂದ ಹಾಗೂ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ. ರಾಜಕೀಯ ಬಲವಿದೆ, ಎರಡು ದಿನಗಳಲ್ಲಿ ನಿಮ್ಮನ್ನು ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಕುರಿತು ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

112 ವಿದ್ಯಾರ್ಥಿಗಳಿಂದ ವಿಧಾನಸಭೆ ಕಲಾಪಗಳ ಅಣಕು ಪ್ರದರ್ಶನ

ಯುವಕರೇ ದೇಶದ ಭವಿಷ್ಯದ ಶಿಲ್ಪಿಗಳು : ಯುವ ಸಂಸತ್ತು ಅಧಿವೇಶನದಲ್ಲಿ ಸಚಿವ ರುದ್ರಪ್ಪ ಲಮಾಣಿ

ಪಾಂಡವ ನ್ಯೂಸ್, ಹಾವೇರಿ : ಯುವಕರು ದೇಶದ ಭವಿಷ್ಯವನ್ನು ರೂಪಿಸುವ ಶಕ್ತಿಯಾಗಿದ್ದು, ಪ್ರಜಾಪ್ರಭುತ್ವದ ಮೌಲ್ಯಗಳು, ಸಂವಿಧಾನದ ಆಶಯಗಳು ಹಾಗೂ ಸಂಸದೀಯ ಕಾರ್ಯವಿಧಾನಗಳ ಕುರಿತು ಅರಿವು ಹೊಂದುವುದು ಅತ್ಯಗತ್ಯ ಎಂದು ಜವಳಿ ಮತ್ತು ಸಕ್ಕರೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಹೇಳಿದರು. ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ-2026ರ ಅಂಗವಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವ ಸಂಸತ್ತು ಅಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚನೆಯಾದ ಭಾರತದ ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕು ಮತ್ತು ಗೌರವ ಕಲ್ಪಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶ್ರೀಮಂತ-ಬಡವ, ಅಧಿಕಾರಿ-ಸಾಮಾನ್ಯ ನಾಗರಿಕ ಎಂಬ ಭೇದವಿಲ್ಲದೆ ಪ್ರತಿಯೊಬ್ಬರ ಮತಕ್ಕೂ ಸಮಾನ ಮೌಲ್ಯವಿದೆ. ಗ್ರಾಮ ಪಂಚಾಯಿತಿಯಿಂದ



ಕೇಂದ್ರ ಸಂಸತ್ತಿನವರೆಗೆ ಪ್ರಜಾಪ್ರಭುತ್ವ ವ್ಯವಸ್ಥೆ ವಿಸ್ತರಿಸಿದ್ದು, ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಿದೆ ಎಂದರು.12ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪದ ಮೂಲಕ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ವಿಚಾರ ವಿನಿಮಯಕ್ಕೆ ವೇದಿಕೆ ಕಲ್ಪಿಸಿದ್ದರು. ಅವರ ವಿಚಾರಧಾರೆಗಳು ಇಂದಿಗೂ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಮಾದರಿಯಾಗಿವೆ. ಯುವಕರು ದೇಶದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರೊಂದಿಗೆ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.

112 ವಿದ್ಯಾರ್ಥಿಗಳಿಂದ ಸದನ ಕಲಾಪ : ಜಿಲ್ಲೆಯ ವಿವಿಧ ತಾಲೂಕುಗಳ ಕಾಲೇಜುಗಳಿಂದ ಆಯ್ಕೆಯಾದ ಆಡಳಿತ ಪಕ್ಷದ 82 ಹಾಗೂ ವಿರೋಧ ಪಕ್ಷದ 40 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 112 ವಿದ್ಯಾರ್ಥಿಗಳು ಯುವ ಸಂಸತ್ತು ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ವಿಧಾನಸಭೆಯ ಮಾದರಿಯಲ್ಲಿ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಕಲಾಪಗಳನ್ನು ನಡೆಸಿ ಗಮನ ಸೆಳೆದರು.

ಹಾವೇರಿ ವಿಶ್ವವಿದ್ಯಾಲಯದ ಕಲ್ಲನಗೌಡ ದೊಡ್ಡಗೌಡರ ಸಭಾಪತಿಯಾಗಿ, ಹಿರೇಕೆರೂರ ಸರ್ಕಾರಿ ಪದವಿಪೂರ್ವ ಕಾಲೇಜಿನ ಐಶ್ವರ್ಯ ಹದಗಲ ಉಪಸಭಾಪತಿಯಾಗಿ, ಹಾವೇರಿಯ ಗಾಂಧಿಪುರ ಕಾಲೇಜಿನ ದಿವ್ಯಾ ಸಹಾನೆ ಮುಖ್ಯಮಂತ್ರಿಯಾಗಿ ಹಾಗೂ ರಾಣೆಬೆನ್ನೂರಿನ ಕಾನೂನು ಕಾಲೇಜಿನ ಗಂಗಾಧರಯ್ಯ ಇಂಗಳಗುಂದಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದರು. ಸಚಿವ ಸಂಪುಟದಲ್ಲಿ 20 ವಿದ್ಯಾರ್ಥಿಗಳಿಗೆ ವಿವಿಧ ಇಲಾಖೆಗಳ ಖಾತೆಗಳನ್ನು ಹಂಚಿಕೆ ಮಾಡಲಾಗಿತ್ತು.

2ನೇ ಪುಟಕ್ಕೆ ▶▶▶

ಶಾಲಾ-ಕಾಲೇಜು ಬಂದ್‌ಗೆ ಆಡಳಿತ ಮಂಡಳಿ ವಿರೋಧ: ಡಾ. ಕುಬೇರಪ್ಪ

ಪಾಂಡವ ನ್ಯೂಸ್, ರಾಣೆಬೆನ್ನೂರು : ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟಿಸುವುದು ತಪ್ಪಲ್ಲ. ಆದರೆ ನ.18ರಿಂದ ಶಾಲಾ-ಕಾಲೇಜು ಬಂದ್‌ಗೆ ಕರೆ ನೀಡಿರುವುದನ್ನು ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಶಾಲಾ-ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟ ವಿರೋಧಿಸುತ್ತದೆ ಎಂದು ಒಕ್ಕೂಟದ ಪದಾಧಿಕಾರಿ ಡಾ. ಆರ್. ಎಂ. ಕುಬೇರಪ್ಪ ತಿಳಿಸಿದ್ದಾರೆ.ಶಾಲಾ-ಕಾಲೇಜು ಬಂದ್‌ಗೆ ನೀಡಿರುವ ಕರೆ ಅವೈಜ್ಞಾನಿಕ ಹಾಗೂ ರಾಜಕೀಯ ಪ್ರೇರಿತವಾಗಿದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಸಮೀಪಿಸುತ್ತಿದ್ದು, ಶಿಕ್ಷಕರ ಮೇಲೂ ಇಲಾಖೆಯ ಕೆಲಸಗಳ ಒತ್ತಡವಿದೆ. ಇಂತಹ ಸಂದರ್ಭದಲ್ಲಿ ಶಾಲೆಗಳನ್ನು ಬಂದ್ ಮಾಡಿ ಶಿಕ್ಷಕರನ್ನು ಬೀದಿಗಿಳಿಸುವುದು ಸರಿಯಲ್ಲ. ಇದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗುವುದಲ್ಲದೆ, ಪೋಷಕರಿಗೂ ಅನ್ಯಾಯವಾಗಲಿದೆ. ಹೀಗಾಗಿ ಬಂದ್‌ಗೆ ನಮ್ಮ ಬೆಂಬಲವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.ಕಾಂಗ್ರೆಸ್ ಸರ್ಕಾರದ ಹಿಂದಿನ ಅವಧಿಯಲ್ಲಿ ಶಿಕ್ಷಣ ಸಚಿವರಾಗಿದ್ದ ಚಂದ್ರಶೇಖರ ಅವರ ಕಾಲದಲ್ಲಿ 28 ಬೇಡಿಕೆಗಳನ್ನು ಮುಂದಿಟ್ಟು 21 ದಿನಗಳ ಕಾಲ ಶಾಲಾ-ಕಾಲೇಜು ಬಂದ್ ಮಾಡಲಾಗಿತ್ತು. ಸಾರ್ವಜನಿಕರ ವಿರೋಧದ ಹಿನ್ನೆಲೆಯಲ್ಲಿ ಸಚಿವರೊಂದಿಗೆ ಸಭೆ ನಡೆಸಿ ಪ್ರತಿಭಟನೆ ಹಿಂಪಡೆಯಲಾಗಿತ್ತು. ಆದರೆ ವೈದ್ಯಕೀಯ ಭತ್ಯೆ ಸೇರಿದಂತೆ ಕೆಲವು ಬೇಡಿಕೆಗಳಿಗೆ ಮಾತ್ರ ಒಪ್ಪಿಗೆ ದೊರೆತಿತ್ತು. 21 ದಿನಗಳ ಮುಷ್ಕರದ ಅವಧಿಯಲ್ಲಿ ಶಿಕ್ಷಕರ ವೇತನ ಕಡಿತವಾಗಿದ್ದರೂ ನಿರೀಕ್ಷಿತ ಪ್ರಯೋಜನ ಸಿಕ್ಕಿರಲಿಲ್ಲ. ಹೀಗಾಗಿ ಮತ್ತೊಮ್ಮೆ ಇಂತಹ ಪ್ರತಿಭಟನೆ ನಡೆಸುವುದು ಅರ್ಥಹೀನ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅನುದಾನಿತ ಶಾಲಾ-ಕಾಲೇಜುಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು, ಅನುದಾನರಹಿತ ಶಾಲೆಗಳಿಗೆ ಅನುದಾನ ನೀಡುವುದು, ಹಳೆಯ ಪಿಂಚಣಿ ಯೋಜನೆ ಮುಂದುವರಿಸುವುದು ಹಾಗೂ ಅತಿಥಿ ಉಪನ್ಯಾಸಕರ ಸೇವೆ ಕಾಯಂ



ಮಾಡುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಲು ತಾವು ಪ್ರಯತ್ನಿಸಿದ್ದಾಗಿ ತಿಳಿಸಿದ್ದಾರೆ.

ಹಳೆಯ ಪಿಂಚಣಿ ಯೋಜನೆ ಜಾರಿ ಕುರಿತು ಸಮಿತಿ ರಚಿಸಿ ವರದಿ ಪಡೆಯಲಾಗಿದೆ. ವಿವಿಧ ರಾಜ್ಯಗಳಲ್ಲಿನ ಅನುಷ್ಠಾನದ ಕುರಿತು ಅಧ್ಯಯನ ನಡೆಯುತ್ತಿದೆ.

2ನೇ ಪುಟಕ್ಕೆ ▶▶▶

ರಾಣೆಬೆನ್ನೂರು ತಾಲೂಕಿನಲ್ಲಿ 6 ಬಾಲಗರ್ಭಿಣಿಯರು ಪತ್ತೆ



ಪಾಂಡವ ನ್ಯೂಸ್, ರಾಣೆಬೆನ್ನೂರು : ತಾಲೂಕಿನಲ್ಲಿ ಪ್ರಸಕ್ತ ಸಾಲಿನ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಆರು ಅಪ್ರಾಪ್ತ ಬಾಲಕಿಯರು ಗರ್ಭಿಣಿಯಾಗಿರುವ ಆಘಾತಕಾರಿ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಗಂಭೀರ ಬೆಳವಣಿಗೆ ತಾಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಚರ್ಚೆಗೆ ಗ್ರಾಸವಾಯಿತು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಹಾಗೂ ತಾಲೂಕು ಆಡಳಿತಾಧಿಕಾರಿ ಡಾ. ಪುನೀತ್ ಅವರು ಪ್ರಕರಣಗಳ ಕುರಿತು ಮಾಹಿತಿ ಪಡೆದು, ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸುಮಾರು 15ರಿಂದ 17 ವರ್ಷದೊಳಗಿನ ಆರು ಬಾಲಕಿಯರು ಗರ್ಭಿಣಿಯಾಗಿರುವುದು ಪತ್ತೆಯಾಗಿದೆ. ಇವರಲ್ಲಿ ಒಬ್ಬರಿಗೆ ಗರ್ಭಪಾತವಾಗಿದ್ದು, ಉಳಿದ ಐದು ಪ್ರಕರಣಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಪ್ರಕಾಶ್ ಸಭೆಗೆ ಮಾಹಿತಿ ನೀಡಿದರು.

ಮೆಡ್ಲೇರಿ ಹಾಗೂ ಮಾಕನೂರು ಭಾಗಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿವೆ. ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ ಎಂದು ತಿಳಿಸಿದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಆಡಳಿತಾಧಿಕಾರಿ ಪುನೀತ್, ಅಪ್ರಾಪ್ತ ಬಾಲಕಿಯರು ಗರ್ಭಿಣಿಯಾಗಲು ಕಾರಣವೇನು ಎಂಬುದನ್ನು ಸಮಗ್ರವಾಗಿ ಪತ್ತೆಹಚ್ಚಬೇಕು. ಪ್ರಕರಣಗಳ ಹಿನ್ನೆಲೆ ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಿಡಿಪಿಒ ಅಧಿಕಾರಿಗಳು ಈ ಕುರಿತು ವಿಶೇಷ ಗಮನಹರಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು.

ರೈತರ ಮುತ್ತಿಗೆ ಭೀತಿಗೆ ಸಭೆಗೆ ಬಾರದ ಕಾರ್ಖಾನೆ ಮಾಲೀಕರು

ಮೂರನೇ ಸಭೆಗೂ ಗೈರು; ರೈತರ ಸಭೆ ರದ್ದು



ಪಾಂಡವ ನ್ಯೂಸ್, ಹಾವೇರಿ : ಕಬ್ಬಿನ ಬೆಲೆ ನಿಗದಿ ವಿಚಾರವಾಗಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ಮತ್ತು ರೈತರ ನಡುವಿನ ಹಗ್ಗಜಗ್ಗಾಟ ಮುಂದುವರಿದಿದೆ. ರೈತರ ಮುತ್ತಿಗೆ ಭೀತಿಯಿಂದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಸಭೆಗೆ ಬರಲು ಹೆದರುತ್ತಿದ್ದಾರೆ. ಹೀಗಾಗಿ ಕೇಂದ್ರ ಸರ್ಕಾರವೇ ಕಬ್ಬಿನ ದರ ನಿಗದಿಪಡಿಸಲಿ ಎಂದು ಸಕ್ಕರೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಹೇಳಿದರು.ನಗರದಲ್ಲಿ ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸಕ್ಕರೆ ಕಾರ್ಖಾನೆಗಳ ಮಾಲೀಕರು ಸಭೆಗೆ ಬರುತ್ತಿಲ್ಲ. ರೈತರು ಮುತ್ತಿಗೆ ಹಾಕಬಹುದು ಎಂಬ ಭಯದಿಂದ ಸಭೆಗೆ ಹಾಜರಾಗಲು ಹಿಂದೇಟು ಹಾಕುತ್ತಿದ್ದಾರೆ. ಮಾಲೀಕರು ಸಭೆಗೆ ಬಾರದಿರುವುದರಿಂದ ರೈತರ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರ ಕಂಡುಕೊಳ್ಳುವುದು ಕಷ್ಟವಾಗುತ್ತಿದೆ. ಹೀಗಾಗಿ ಕೇಂದ್ರ ಸರ್ಕಾರವೇ ಕಬ್ಬಿನ ದರ ನಿಗದಿಪಡಿಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಮೂರು ಸಭೆಯಾದರೂ ಒಮ್ಮತವಿಲ್ಲ : ಕಬ್ಬಿನ ದರ ನಿಗದಿ ಕುರಿತು ಈಗಾಗಲೇ ಮೂರು ಸುತ್ತಿನ ಸಭೆ ನಡೆಸಲು ಪ್ರಯತ್ನಿಸಲಾಗಿದೆ. ಆದರೆ, ಮೂರನೇ ಸಭೆಗೂ ಕಾರ್ಖಾನೆಗಳ ಮಾಲೀಕರು ಗೈರಾಗಿದ್ದಾರೆ. ಇದರಿಂದ ರೈತರೊಂದಿಗೆ ನಡೆಸಬೇಕಿದ್ದ ಸಭೆಯನ್ನೇ ರದ್ದುಗೊಳಿಸುವಂತಾಗಿದೆ. ಸಭೆಗಳು ನಡೆದರೂ ಸಮಸ್ಯೆಗೆ ಪರಿಹಾರ ಸಿಗದಿರುವುದು ಕಬ್ಬು ಬೆಳೆಗಾರರ ಅಸಮಾಧಾನಕ್ಕೆ ಕಾರಣವಾಗಿದೆ.

3 ಸಾವಿರಕ್ಕೆ ಮಾಲೀಕರ ಒಲವು : ಹಾವೇರಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಮಾಲೀಕರು ಪ್ರತಿ ಟನ್ ಕಬ್ಬಿಗೆ 3 ಸಾವಿರದಿಂದ 3,100 ನೀಡಲು ಮುಂದಾಗಿದ್ದಾರೆ. ಆದರೆ, ರೈತರು ಈ ದರಕ್ಕೆ ಒಪ್ಪುತ್ತಿಲ್ಲ. ಬೆಳಗಾವಿ ಮಾದರಿಯಲ್ಲಿ ಕಬ್ಬಿಗೆ ದರ ನಿಗದಿಪಡಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ. ಕಬ್ಬು ಬೆಳೆಯಲು ತಗಲುವ ಉತ್ಪಾದನಾ ವೆಚ್ಚ, ಕಟಾವು ಮತ್ತು ಸಾಗಣೆ ವೆಚ್ಚ ಹೆಚ್ಚಾಗಿರುವುದರಿಂದ ಕಾರ್ಖಾನೆಗಳ ಪ್ರಸ್ತಾವಿತ ದರದಿಂದ ರೈತರಿಗೆ ನ್ಯಾಯ ಸಿಗುವುದಿಲ್

ಮೊದಲ ಪುಟದಿಂದ.....

ಯುವಕರೇ ದೇಶದ ಭವಿಷ್ಯದ.....

ಪ್ರಶ್ನೋತ್ತರ ಕಲಾಪ, ಶೂನ್ಯ ವೇಳೆ, ನಿಯಮ 69ರಡಿ ಚರ್ಚೆ, ಗಮನಸೆಳೆಯುವ ಪ್ರಶ್ನೆಗಳು ಹಾಗೂ ವಿಧೇಯಕಗಳ ಮಂಡನೆ ಸೇರಿದಂತೆ ವಿಧಾನಸಭೆಯ ವಿವಿಧ ಕಲಾಪಗಳನ್ನು ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ನಡೆಸಿಕೊಟ್ಟರು.ಶಿಕ್ಷಣ, ಆರೋಗ್ಯ, ಕೃಷಿ, ವಸತಿ, ಕುಡಿಯುವ ನೀರು, ರಸ್ತೆ ಅಭಿವೃದ್ಧಿ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ಆಹಾರ ಮತ್ತು ನಾಗರಿಕ ಸರಬರಾಜು, ಅರಣ್ಯ, ಸಮಾಜ ಕಲ್ಯಾಣ, ಕಾರ್ಮಿಕ, ಸಾರಿಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಮಸ್ಯೆಗಳ ಕುರಿತು ಚರ್ಚಿಸಿದರು. ಗ್ರಾಮೀಣ ಭಾಗದ ಪತ್ರಕರ್ತರ ಸಮಸ್ಯೆಗಳೂ ಸೇರಿದಂತೆ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಸದನದಲ್ಲಿ ಪ್ರಸ್ತಾಪಿಸಿ ಗಮನ ಸೆಳೆದರು.**ಎರಡು ವಿಧೇಯಕಗಳ ಮಂಡನೆ :** ಅಧಿವೇಶನದ ಪ್ರಮುಖ ಘಟ್ಟವಾಗಿ ಕರ್ನಾಟಕ ವಿಧಾನಸಭೆಯಲ್ಲಿ ಯುವಕರಿಗೆ ಪ್ರಾತಿನಿಧ್ಯ ಕಾಯ್ದೆ–2026 ವಿಧೇಯಕವನ್ನು ದೀಪಾ ಮರಿಗೌಡ್ರು ಮಂಡಿಸಿದರು. ಕೃತಕ ಬುದ್ಧಿಮತ್ತೆ ಮರುಕೌಶಲ್ಯ ಮಸೂದೆ–2026 ಅನ್ನು ಸುಮಾ ಡಿ. ಜಡಿಯಣ್ಣನವರ ಮಂಡಿಸಿದರು. ಎರಡೂ ವಿಧೇಯಕಗಳ ಕುರಿತು ವಿದ್ಯಾರ್ಥಿ ಪ್ರತಿನಿಧಿಗಳು ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.ಯುವ ಸಂಸತ್ತಿನ ಮೂಲಕ ವಿದ್ಯಾರ್ಥಿಗಳು ಆಡಳಿತ ಮತ್ತು ವಿರೋಧ ಪಕ್ಷಗಳ ಜವಾಬ್ದಾರಿ, ಪ್ರಶ್ನಿಸುವ ಮನೋಭಾವ, ಚರ್ಚೆ, ಸಂವಾದ ಹಾಗೂ ಭಿನ್ನಾಭಿಪ್ರಾಯಗಳಿಗೆ ಗೌರವ ನೀಡುವ ಸಂಸದೀಯ ಸಂಸ್ಕೃತಿಯನ್ನು ಪ್ರಾಯೋಗಿಕವಾಗಿ ಅರಿತುಕೊಂಡರು. ಮಕ್ಕಳ ದಿನಾಚರಣೆ ಆಚರಣೆ : ಕಾರ್ಯಕ್ರಮದ ಆರಂಭದಲ್ಲಿ ನಾಡಗೀತೆ ಹಾಗೂ ಸಂವಿಧಾನದ ಪೀಠಿಕೆ ಬೋಧಿಸಲಾಯಿತು. ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರ ಜನ್ಮದಿನದ ಅಂಗವಾಗಿ ಮಕ್ಕಳ ದಿನಾಚರಣೆ ಆಚರಿಸಿ, ನೆಹರು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಲಾಯಿತು. ರಾಷ್ಟ್ರಗೀತೆಯೊಂದಿಗೆ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.ಬ್ಯಾಡಗಿ ಶಾಸಕ ಹಾಗೂ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ರಾಣೆಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಭುಗೌಡ ಬಿಷ್ಟನಗೌಡ್ರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಮೈದೂರ, ಆರ್ಥಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ವಿಶಾಲ್ ಆರ್., ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಲ್ಜೀತ್ ಕುಮಾರ್, ಅಪರ ಜಿಲ್ಲಾಧಿಕಾರಿ ಎಲ್. ನಾಗರಾಜ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮೋಹನ ದಂಡಿನ ಸೇರಿದಂತೆ ಅಧಿಕಾರಿಗಳು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೊದಲ ಪುಟದಿಂದ.....

ಶಾಲಾ–ಕಾಲೇಜು ಬಂದ್‌ಗೆ.....

ಅನುದಾನಿತ ಶಾಲಾ–ಕಾಲೇಜುಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯೂ ಪ್ರಗತಿಯಲ್ಲಿದೆ. ಸರ್ಕಾರ ಬೇಡಿಕೆಗಳ ಈಡೇರಿಕೆಗೆ ಕ್ರಮ ಕೈಗೊಳ್ಳುತ್ತಿರುವ ಸಂದರ್ಭದಲ್ಲಿ ಬಂದ್ ನಡೆಸುವುದು ಸೂಕ್ತವಲ್ಲ ಎಂದಿದ್ದಾರೆ.ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದಲೇ ಶಿಕ್ಷಕರು ಹಾಗೂ ಪದವೀಧರರ ಪ್ರತಿನಿಧಿಗಳನ್ನು ವಿಧಾನಪರಿಷತ್ತಿಗೆ ಆಯ್ಕೆ ಮಾಡಲಾಗಿದೆ. ಶಿಕ್ಷಕರನ್ನು ಬೀದಿಗಿಳಿಸುವ ಬದಲು ಎಲ್ಲ 14 ವಿಧಾನಪರಿಷತ್ ಸದಸ್ಯರು ವಿಧಾನಸೌಧದ ಎದುರು ಉಪವಾಸ ಸತ್ಯಾಗ್ರಹ ನಡೆಸಲಿ ಎಂದು ಸಲಹೆ ನೀಡಿದ್ದಾರೆ. ಶಿಕ್ಷಕರ ಬೇಡಿಕೆಗಳ ಈಡೇರಿಕೆಗೆ ಸರ್ಕಾರದೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ಯಾವುದೇ ಶಿಕ್ಷಕರು ರಾಜಕೀಯ ಪ್ರೇರಿತ ಮುಷ್ಕರದಲ್ಲಿ ಪಾಲ್ಗೊಳ್ಳಬಾರದು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಲಾ–ಕಾಲೇಜುಗಳ ಕಾರ್ಯಚಟುವಟಿಕೆಗಳಿಗೆ ಅಡ್ಡಿಯಾಗದಂತೆ ಸಹಕರಿಸಬೇಕು ಎಂದು ಡಾ. ಕುಬೇರಪ್ಪ ಮನವಿ ಮಾಡಿದ್ದಾರೆ. ಅವರು ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಶಾಲಾ–ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದ ಪದಾಧಿಕಾರಿ ಹಾಗೂ ಕೆಪಿಸಿಸಿ ಶಿಕ್ಷಕರ ಮತ್ತು ಪದವೀಧರ ಘಟಕದ ನಿಕಟಪೂರ್ವ ರಾಜ್ಯಾಧ್ಯಕ್ಷರಾಗಿದ್ದಾರೆ.

ಮೊದಲ ಪುಟದಿಂದ.....

ಮೂರನೇ ಸಭೆಗೂ ಗೈರು:....

ಆದರೂ ರೈತರ ಬೇಡಿಕೆ ಮತ್ತು ಕಾರ್ಖಾನೆಗಳ ಮಾಲೀಕರ ಪ್ರಸ್ತಾವನೆ ನಡುವೆ ಅಂತರ ಮುಂದುವರಿದಿದೆ. ರೈತರು ಬೆಳಗಾವಿ ಮಾದರಿ ದರಕ್ಕೆ ಪಟ್ಟು ಹಿಡಿದಿರುವುದರಿಂದ ಬಿಕ್ಕಟ್ಟು ಇತ್ಯರ್ಥವಾಗಿಲ್ಲ.ಒಂದೆಡೆ ರೈತರ ಹೋರಾಟ ತೀವ್ರಗೊಳ್ಳುತ್ತಿದ್ದರೆ, ಮತ್ತೊಂದೆಡೆ ಕಾರ್ಖಾನೆಗಳ ಮಾಲೀಕರು ಸಭೆಗೆ ಗೈರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಕಬ್ಬಿಗೆ ಸೂಕ್ತ ದರ ನಿಗದಿಪಡಿಸಬೇಕೆಂಬ ಸಚಿವರ ಹೇಳಿಕೆ ಮಹತ್ವ ಪಡೆದಿದೆ. ಕಬ್ಬು ಬೆಳೆಗಾರರ ಬಹುದಿನಗಳ ಬೇಡಿಕೆಗೆ ಸರ್ಕಾರ ಯಾವಾಗ ಸ್ಪಂದಿಸಲಿದೆ ಎಂಬುದನ್ನು ರೈತರು ಎದುರು ನೋಡುತ್ತಿದ್ದಾರೆ.

ಮೊದಲ ಪುಟದಿಂದ.....

21 ಅಡಿ ಏಕಶಿಲಾ ಮೂರ್ತಿ.....

ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ, ಶಾಸಕ ಬಸವರಾಜ ಪಾಟೀಲ ಯತ್ನಾಳ, ರಾಜ್ಯಸಭಾ ಸದಸ್ಯ ಡಾ. ನಾಗರಾಜ, ಮಾಜಿ ಸಚಿವ ಶ್ರೀರಾಮುಲು, ಮಾಜಿ ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಮಾಜಿ ಶಾಸಕರಾದ ಶಿವರಾಜ ಸಜ್ಜನರ, ವಿರೂಪಾಕ್ಷಪ್ಪ ಬಳ್ಳಾರಿ ಹಾಗೂ ಬಿಜೆಪಿ ರಾಜ್ಯ ಎಸ್‌ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತ ಸೇರಿದಂತೆ ವಿವಿಧ ಮಠಗಳ ಮಹಾಸ್ವಾಮಿಗಳು ಮತ್ತು ಗಣ್ಯರು ಪಾಲ್ಗೊಳ್ಳಲಿದ್ದಾರೆ.**ನ.17: ಬಸವಣ್ಣನವರ ಏಕಶಿಲಾ ಮೂರ್ತಿ ಲೋಕಾರ್ಪಣೆ :** ಮಂಗಳವಾರ ನವೆಂಬರ್ 17ರಂದು ಮೂರು ದಿನಗಳ ಕಾರ್ಯಕ್ರಮದ ಕೇಂದ್ರಬಿಂದುವಾದ ಬಸವಣ್ಣನವರ 21 ಅಡಿ ಎತ್ತರದ ಏಕಶಿಲಾ ಮೂರ್ತಿಯ ಲೋಕಾರ್ಪಣೆ ನಡೆಯಲಿದೆ. ಗದಗ ತೋಂಟದಾರ್ಯ ಮಠದ ಶ್ರೀ ತೋಂಟದ ಸಿದ್ಧರಾಮ ಸ್ವಾಮೀಜಿ ಹಾಗೂ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ, ಜಿಲ್ಲಾಧಿಕಾರಿ ದಾನಮ್ಮನವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ತಹಶೀಲ್ದಾರ್ ಕೆ. ಶರಣಮ್ಮ, ಡಿಯುಜಿ ರಾಜ್ಯಾಧ್ಯಕ್ಷ ಮಹಿಮಾ ಪಾಟೀಲ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಮಲ್ಲಿಕಾರ್ಜುನ ಮಠದ, ಹನುಮನಮಟ್ಟಿ ಕೃಷಿ ಮಹಾವಿದ್ಯಾಲಯದ ಡೀನ್ ಡಾ. ಯಡಳ್ಳಿ, ಬಾಗಲಕೋಟೆ ಬಿವಿಬಿ ಸಮೂಹದ ಆಡಳಿತಾಧಿಕಾರಿ ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಡಿಡಿಪಿಐ ಮೋಹನ ದಂಡಿನ, ಹಾವೇರಿಯ ಕೆಎಂಎಫ್ ಅಧ್ಯಕ್ಷ ಮಂಜನಗೌಡ್ರ ಪಾಟೀಲ, ಕೆಎಂಎಫ್ ನಿರ್ದೇಶಕ ಬಸವೇಶಗೌಡ ಪಾಟೀಲ ಹಾಗೂ ಶ್ರೀನಿವಾಸ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಭಿಕ್ಷಾವರ್ತಿಮಠ ಸಂಪಾದಕತ್ವದ 'ಲಿಂಗಪೂಜಾ ಲೋಲರು' ಗ್ರಂಥ ಬಿಡುಗಡೆಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಮೂರು ದಿನಗಳ ಕಾಲ ನಡೆಯಲಿರುವ ಈ ಕಾರ್ಯಕ್ರಮ ಗುತ್ತಲ ಪಟ್ಟಣದ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗುವ ನಿರೀಕ್ಷೆಯಿದೆ. ಬಸವಾಭಿಮಾನಿಗಳು, ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಸೌರಭ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆ: ಪ್ರಭುಗೌಡ

ಪಾಂಡವ ನ್ಯೂಸ್, ಹಾವೇರಿ : ಯುವ ಸೌರಭ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ವರದಾನವಾಗಿದ್ದು, ಅವರ ಪ್ರತಿಭೆ ಹಾಗೂ ಸಾಂಸ್ಕೃತಿಕ ಕೌಶಲ್ಯಗಳನ್ನು ಅನಾವರಣಗೊಳಿಸಲು ಉತ್ತಮ ವೇದಿಕೆಯನ್ನು ಕಲ್ಪಿಸಿಕೊಡುತ್ತವೆ ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಭುಗೌಡ ಎಸ್. ಬಿಷ್ಟನಗೌಡ್ರ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಶನಿವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜ್ ಹಾವೇರಿ ಇವರ ಸಂಯುಕ್ತ ಆಶ್ರಯದಲ್ಲಿ ಯುವ ಸೌರಭ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು, ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಂಡು ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸುವುದರ ಜೊತೆಗೆ ಉತ್ತಮ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಗುರುತಿಸಿ, ವ್ಯಕ್ತಪಡಿಸಲು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಲು ಯುವ ಸೌರಭದಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ



ಎಂದು ತಿಳಿಸಿದರು.

ಯುವ ಸೌರಭ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸೃಜನಶೀಲತೆ, ಆತ್ಮವಿಶ್ವಾಸ ಹಾಗೂ ಪ್ರತಿಭಾ ವಿಕಸನಕ್ಕೆ ಪ್ರೇರಣೆ ನೀಡುವ ಉತ್ತಮ ವೇದಿಕೆಗಳಾಗಿವೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಅವರು ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯುವ ಸೌರಭ ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಹಾಗೂ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ವೇದಿಕೆ ದೊರೆಯಲಿದೆ ಎಂದರು.

ಜಿಲ್ಲೆಯ ಯುವಕರು ಹಾಗೂ ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬೇಕು. ವಿದ್ಯಾರ್ಥಿಗಳ ಭವಿಷ್ಯ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಪೂರಕವಾಗಿ ಇಲಾಖೆ ಇನ್ನೂ ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯದಲ್ಲಿ ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ರವಿಕುಮಾರ್ ಟಿ ಪೂಜಾರ್, ವಿದ್ಯಾರ್ಥಿಗಳು, ಕಲಾ ತಂಡಗಳು ಹಾಗೂ ಇತರರು ಉಪಸ್ಥಿತರಿದ್ದರು.

ಕ್ಷೇತ್ರ ಮರುವಿಂಗಡಣೆ ಮಸೂದೆ ಜಾರಿಗೆ ವಿಶೇಷ ಅಧಿವೇಶನ!

ಪಾಂಡವ ನ್ಯೂಸ್, ನವದೆಹಲಿ : ಮಹಿಳಾ ಮೀಸಲಾತಿ ಕಾಯ್ದೆ–2023 ಜಾರಿಗೆ ಅಗತ್ಯವಾಗಿರುವ ಕ್ಷೇತ್ರ ಮರುವಿಂಗಡಣೆ (ಡಿಲಿಮಿಟೇಶನ್) ಮಸೂದೆ–2026 ಅನ್ನು ಅಂಗೀಕರಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ ಎನ್ನಲಾಗಿದೆ. ಮಸೂದೆ ಅಂಗೀಕಾರಕ್ಕೆ ಅಗತ್ಯವಿರುವ ಮೂರನೇ ಎರಡರಷ್ಟು ಬಹುಮತಕ್ಕಿಂತ ಸರ್ಕಾರದ ಬಳಿ ಕನಿಷ್ಠ 15ರಿಂದ 16 ಮತಗಳು ಹೆಚ್ಚುವರಿಯಾಗಿ ಇವೆ ಎಂಬ ವಿಶ್ವಾಸದಲ್ಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.ಆದರೆ, ವಿಶೇಷ ಅಧಿವೇಶನ ಯಾವಾಗ ನಡೆಯಲಿದೆ ಮತ್ತು ಎಷ್ಟು ದಿನಗಳ ಕಾಲ ನಡೆಯಲಿದೆ ಎಂಬುದರ ಕುರಿತು ಇನ್ನೂ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕಾರಕ್ಕೆ ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಅಗತ್ಯವಿದ್ದು, ಪ್ರಸ್ತುತ ಮೂರು ಸ್ಥಾನಗಳು ಖಾಲಿ ಇರುವ 543 ಸದಸ್ಯ ಬಲದ ಸದನದಲ್ಲಿ 361 ಮತಗಳ ಅಗತ್ಯವಿದೆ.ಪ್ರಸ್ತಾವಿತ ಡಿಲಿಮಿಟೇಶನ್ ಮಸೂದೆಯ ಮೂಲಕ ಲೋಕಸಭೆಯ ಸದಸ್ಯರ ಸಂಖ್ಯೆಯನ್ನು ' ಪ್ರಸ್ತಾಪವಿದೆ.ಏಪ್ರಿಲ್‌ನ ಸೋಲಿನ ಬಳಿಕ ಹೊಸ ಪ್ರಯತ್ನ : ಏಪ್ರಿಲ್ 17ರಂದು ನಡೆದ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಕಾನೂನಿಗೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಅಗತ್ಯ ಬೆಂಬಲ ಪಡೆಯಲು ವಿಫಲವಾಗಿತ್ತು. ಆಗಸ್ಟ್ 13ರಂದು ಮುಕ್ತಾಯಗೊಂಡ ಮುಂಗಾರು ಅಧಿವೇಶನವನ್ನು ಇನ್ನೂ ಅಧಿಕೃತವಾಗಿ ಅಂತ್ಯಗೊಳಿಸಿಲ್ಲ. ಹೀಗಾಗಿ ಅಲ್ಪಾವಧಿಯಲ್ಲೆ ಸಂಸತ್ತನ್ನು ಮತ್ತೆ ಕರೆಯುವ ಸಾಧ್ಯತೆ ಇದೆ. ಪ್ರಸ್ತುತ ಅಧಿವೇಶನವು 91 ದಿನಗಳಿಂದ ಅಧಿಕೃತವಾಗಿ ಮುಕ್ತಾಯಗೊಳ್ಳದೆ ಉಳಿದಿದ್ದು, 2008ರಲ್ಲಿ ದಾಖಲಾಗಿದ್ದ 87 ದಿನಗಳ ಹಿಂದಿನ ದಾಖಲೆಯನ್ನೂ ಮೀರಿದೆ.ದಕ್ಷಿಣ ರಾಜ್ಯಗಳ ಆತಂಕಕ್ಕೆ ಪರಿಹಾರ ಹುಡುಕಾಟ : ಡಿಲಿಮಿಟೇಶನ್ ವಿಚಾರದಲ್ಲಿ ದಕ್ಷಿಣ ರಾಜ್ಯಗಳು ವ್ಯಕ್ತಪಡಿಸುತ್ತಿರುವ ಆತಂಕಗಳನ್ನು ನಿವಾರಿಸಲು ಕೇಂದ್ರ ಸರ್ಕಾರ ಏಪ್ರಿಲ್‌ನಲ್ಲಿ ವಿರೋಧ ಪಕ್ಷಗಳೊಂದಿಗೆ, ವಿಶೇಷವಾಗಿ ದಕ್ಷಿಣ ಭಾರತದ ಪಕ್ಷಗಳೊಂದಿಗೆ ಚರ್ಚೆ ನಡೆಸಿತ್ತು. 1971ರ ಜನಗಣತಿಯ ಆಧಾರದ ಮೇಲೆ ರಾಜ್ಯಗಳ ನಡುವಿನ ಪ್ರಸ್ತುತ ಲೋಕಸಭಾ ಸ್ಥಾನಗಳ ಅನುಪಾತವನ್ನು ಕಾಯ್ದುಕೊಂಡು, ಎಲ್ಲಾ ರಾಜ್ಯಗಳ ಲೋಕಸಭಾ ಸ್ಥಾನಗಳನ್ನು ಶೇ.50ರಷ್ಟು ಹೆಚ್ಚಿಸುವ ಪ್ರಸ್ತಾಪವನ್ನೂ ಸರ್ಕಾರ ಮುಂದಿಟ್ಟಿತ್ತು ಎನ್ನಲಾಗಿದೆ.2029ರ ಲೋಕಸಭಾ ಚುನಾವಣೆಗೆ ಮುನ್ನ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರುವ ಉದ್ದೇಶದಿಂದ ಈ ಸೂತ್ರವನ್ನು ಮುಂದಿಟ್ಟಿದ್ದರೂ, ಏಪ್ರಿಲ್‌ನಲ್ಲಿ ಹಂಚಿಕೆಯಾಗಿದ್ದ ಡಿಲಿಮಿಟೇಶನ್ ಮಸೂದೆಯಲ್ಲಿ ಈ ತಿದ್ದುಪಡಿ ಇರಲಿಲ್ಲ.

ರಾಷ್ಟ್ರಮಟ್ಟದ ಶೂಟಿಂಗ್ ಸ್ಪರ್ಧೆಗೆ ರಿಯಾನ್ ಅಹಮದ್ ಆಯ್ಕೆ

ಪಾಂಡವ ನ್ಯೂಸ್, ಗದಗ: ತುಮಕೂರಿನಲ್ಲಿ ನಡೆದ ರಾಜ್ಯಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ಧಾರವಾಡದ ಗುರುದೇವ್‌ನ ಜಿ.ಜಿ. ಪದವಿಪೂರ್ವ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ರಿಯಾನ್ ಅಹಮದ್ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸ್ಪರ್ಧಿಗಳ ನಡುವೆ ಅತ್ಯುತ್ತಮ ಪ್ರದರ್ಶನ ನೀಡಿದ ರಿಯಾನ್, ತನ್ನ ಏಕಾಗ್ರತೆ, ತಾಳ್ಮೆ ಹಾಗೂ ಗುರಿ ಸಾಧಿಸುವ ನಿಖರತೆಯಿಂದ ಗಮನ ಸೆಳೆದಿದ್ದಾನೆ. ಈ ಸಾಧನೆಯ ಮೂಲಕ ಕಾಲೇಜು ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾನೆ.

ತರಬೇತುದಾರ ಬಸವರಾಜ ಹೊಂಬಾಳಿ ಮಾತನಾಡಿ, ಶೂಟಿಂಗ್ ಕ್ರೀಡೆಯಲ್ಲಿ ಸಾಧನೆ ಮಾಡಲು ನಿರಂತರ ಅಭ್ಯಾಸ, ಏಕಾಗ್ರತೆ, ಶಿಸ್ತು ಮತ್ತು ಆತ್ಮವಿಶ್

ಪ್ರಮುಖ ಸಂಕ್ಷಿಪ್ತ ಸುದ್ದಿ

ಶಾಂತಿ ಕೆ. ಅಪ್ಪಣ್ಣ ಅವರಿಗೆ ಸೃಜನ ಪ್ರಶಸ್ತಿ

ಪಾಂಡವ ನ್ಯೂಸ್, ಹಾನಗಲ್: ಶೇಷಗಿರಿಯ ಗಜಾನನ ಯುವಕ ಮಂಡಳಿಯ ಸೃಜನ ಪ್ರಶಸ್ತಿಗೆ ಕೊಡಗಿನ ಶಾಂತಿ ಕೆ. ಅಪ್ಪಣ್ಣ ಆಯ್ಕೆಯಾಗಿದ್ದಾರೆ. ನ.15ರಂದು ಮಧ್ಯಾಹ್ನ 3.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಕನ್ನಡ ರಾಜ್ಯೋತ್ಸವ ಕವಿಗೋಷ್ಠಿ ನಡೆಯಲಿದೆ.

ಸಮಾರಂಭದಲ್ಲಿ ಧಾರವಾಡದ ಆನಂದ ಪಾಟೀಲ ಪ್ರಶಸ್ತಿ ಪ್ರದಾನ ಮಾಡಲಿದ್ದು, ಗಜಾನನ ಯುವಕ ಮಂಡಳಿಯ ಅಧ್ಯಕ್ಷ ಪ್ರಭು ಗುರಪ್ಪನವರ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರಿನ ಲಕ್ಷ್ಮಣ ಕೊಡಸೆ, ಸಾಹಿತಿ ಮಾರುತಿ ಶಿಡ್ಲಾಪುರ, ಸಾಹಿತಿ ಲಿಂಗರಾಜ ಸೊಟ್ಟಪ್ಪನವರ, ರೇವಣಸಿದ್ಧಪ್ಪ ಜಿ.ಆರ್. ಹಾಗೂ ನಾಗರಾಜ ಧಾರೇಶ್ವರ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ನಂತರ ಸಂಜೆ 4 ಗಂಟೆಗೆ ಕವಿಗೋಷ್ಠಿ ನಡೆಯಲಿದ್ದು, ಕವಿಗಳು ಕವನ ವಾಚನ ಮಾಡಲಿದ್ದಾರೆ ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ನ.20ರಂದು ಜಿಲ್ಲಾಮಟ್ಟದ ಯುವಜನೋತ್ಸವ

ಪಾಂಡವ ನ್ಯೂಸ್, ಚಿತ್ರದುರ್ಗ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2026–27ನೇ ಸಾಲಿನ ಜಿಲ್ಲಾಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಇದೇ ನವೆಂಬರ್ 20ರಂದು ಬೆಳಿಗ್ಗೆ 9.30ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣ ಆವರಣದ ಕ್ರೀಡಾಭವನದಲ್ಲಿ ಏರ್ಪಡಿಸಲಾಗಿದೆ.

ಭಾಗವಹಿಸಲು ಇಚ್ಛಿಸುವ ಸ್ಪರ್ಧಾಳುಗಳು ನ.20ರಂದು ಬೆಳಿಗ್ಗೆ 9 ರಿಂದ 10.30 ರೊಳಗಾಗಿ ಕ್ರೀಡಾಭವನದ ಆಡಿಟೋರಿಯಂನಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಬೆಳಿಗ್ಗೆ 10.30 ರಿಂದ ಕಾರ್ಯಕ್ರಮ ಪ್ರಾರಂಭಿಸಲಾಗುವುದು.

ಜಿಲ್ಲಾಮಟ್ಟದ ಯುವ ಜನೋತ್ಸವದಲ್ಲಿ ಭಾಗವಹಿಸುವ ಸ್ಪರ್ಧಾಳುಗಳು 15 ರಿಂದ 29 ವರ್ಷದೊಳಗಿನ ಯುವಕ ಯುವತಿಯರು ಮಾತ್ರ ಭಾಗವಹಿಸಬಹುದು. ಜಿಲ್ಲೆಯ ಯುವಕ, ಯುವತಿಯರು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ಶಾಲಾ, ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಬಹುದು. ಜಿಲ್ಲಾಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಸ್ಪರ್ಧಿಗಳು ಮಾತ್ರ ರಾಜ್ಯಮಟ್ಟದ ಯುವ ಜನೋತ್ಸವದಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ. ಜಿಲ್ಲಾಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಿ ವಿಜೇತರಾದವರಿಗೆ ನಗದು ಬಹುಮಾನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಚಿತ್ರದುರ್ಗ ದೂರವಾಣಿ ಸಂಖ್ಯೆ–08194–235635 ಹಾಗೂ 9611673475 ಗೆ ಸಂಪರ್ಕಿಸಬಹುದು.

2026–27ನೇ ಸಾಲಿನ ಯುವ ಜನೋತ್ಸವ ಸ್ಪರ್ಧೆಗಳ ವಿವರ ಇಂತಿದೆ. ಸಾಂಸ್ಕೃತಿಕ ವಿಭಾಗದಡಿ ಜನಪದ ನೃತ್ಯ (ತಂಡ) ಮತ್ತು ಜನಪದ ಗೀತೆ (ತಂಡ) ಸ್ಪರ್ಧೆಗಳಲ್ಲಿ 7+3 ಭಾಗವಹಿಸುವವರ ಸಂಖ್ಯೆ ಇದ್ದು, ಸ್ಪರ್ಧೆಯ ಸಮಯ 5 ರಿಂದ 8 ನಿಮಿಷಗಳಾಗಿರುತ್ತದೆ. 'ನಶ ಮುಕ್ತ ಯುವ' ವಿಷಯದ ಕುರಿತಾದ ಚಿತ್ರಕಲೆಗೆ 6 ಗಂಟೆಗಳು ಹಾಗೂ ನುಕ್ಕಾಡ್ ನಾಟಕಕ್ಕೆ (10 ಜನ, ಗರಿಷ್ಠ ಸಮಯ 7 ನಿಮಿಷ) ಅವಕಾಶವಿದೆ. ಹಾಗೆಯೇ ಹಿಂದಿ, ಆಂಗ್ಲ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಕವಿತೆ ಬರೆಯುವ ಸ್ಪರ್ಧೆಗೆ 1 ಸ್ಪರ್ಧಿಗೆ 1 ಗಂಟೆ 30 ನಿಮಿಷಗಳ ಸಮಯ ನಿಗದಿಪಡಿಸಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಅಂಚೆ ಜೀವ ವಿಮೆ ಸೇವೆಗಳಲ್ಲಿ ನ.16 ರಿಂದ ತಾತ್ಕಾಲಿಕ ವ್ಯತ್ಯಯ

ಪಾಂಡವ ನ್ಯೂಸ್, ಬಳ್ಳಾರಿ : ಅಂಚೆ ಇಲಾಖೆಯು ತನ್ನ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ನಿಟ್ಟಿನಲ್ಲಿ ಹೊಸ ಇನ್ಶೂರೆನ್ಸ್ ಮ್ಯಾನೇಜ್ ಮೆಂಟ್ ಸೊಲ್ಯೂಷನ್ ವ್ಯವಸ್ಥೆಗೆ ಬದಲಾಗುತ್ತಿದ್ದು, ಇದರ ಹಿನ್ನೆಲೆಯಲ್ಲಿ ಅಂಚೆ ಜೀವ ವಿಮೆ ಮತ್ತು ಗ್ರಾಮೀಣ ಅಂಚೆ ಜೀವ ವಿಮೆ ಸೇವೆಗಳಲ್ಲಿ ತಾತ್ಕಾಲಿಕ ವ್ಯತ್ಯಯ ಉಂಟಾಗಲಿದೆ.

ನವೆಂಬರ್ 16 ರಿಂದ 24 ರವರೆಗೆ ಅಂಚೆ ಕಚೇರಿಗಳು, ಗ್ರಾಹಕ ಸೇವಾ ಕೇಂದ್ರಗಳು ಹಾಗೂ ಆನ್ ಲೈನ್ ಮಾಧ್ಯಮಗಳ ಮೂಲಕ ಪಿಎಲ್ಐ/ಆರ್ಪಿಎಲ್ಐ ಸೇವೆಗಳು ಲಭ್ಯವಿರುವುದಿಲ್ಲ.

ಗ್ರಾಹಕರಿಗೆ ಸೂಚನೆಗಳು:ಗ್ರಾಹಕರು ತಮ್ಮ ಬಾಕಿ ಇರುವ ಅಥವಾ ಪಾವತಿಸಬೇಕಾದ ನವೀಕರಣ ಪ್ರೀಮಿಯಂಗಳನ್ನು ನವೆಂಬರ್ 15 ರ ರಾತ್ರಿ 11.59ರೊಳಗೆ ಕಡ್ಡಾಯವಾಗಿ ಪಾವತಿಸುವಂತೆ ಕೋರಲಾಗಿದೆ. ಬಾಕಿ ಇರುವ ಪಿಎಲ್ಐ/ಆರ್ಪಿಎಲ್ಐ ವಹಿವಾಟುಗಳು ಮತ್ತು ಇತರ ಸೇವಾ ವಿನಂತಿಗಳನ್ನು ಕೂಡ ನಿರ್ದಿಷ್ಟ ದಿನಾಂಕದೊಳಗೆ ಪೂರ್ಣಗೊಳಿಸಬೇಕು.ಬಾಕಿ ದಾಖಲೆಗಳು ಅಥವಾ ಇತರ ಅವಶ್ಯಕತೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಪಿಎಲ್ಐ/ಆರ್ಪಿಎಲ್ಐ ಪ್ರತಿನಿಧಿಗಳು (ಸೇಲ್ಸ್ ಫೋರ್ಸ್) ಅಥವಾ ಸಿಪಿಸಿ ಅನ್ನು ಸಂಪರ್ಕಿಸಬಹುದಾಗಿದೆ. ಹೊಸ ಇನ್ಶೂರೆನ್ಸ್ ಮ್ಯಾನೇಜ್ ಮೆಂಟ್ ಸೊಲ್ಯೂಷನ್ ವ್ಯವಸ್ಥೆಯು ನವೆಂಬರ್ 25 ರಂದು ದೇಶಾದ್ಯಂತ ಜಾರಿಗೆ ಬರಲಿದೆ. ವ್ಯವಸ್ಥೆ ಮರುಸ್ಥಾಪನೆಯಾದ ಕೂಡಲೇ ಪಿಎಲ್ಐ/ಆರ್ಪಿಎಲ್ಐ ಸೇವೆಗಳು ಮತ್ತೆ ಪುನರಾರಂಭಗೊಳ್ಳಲಿವೆ. ಈ ಸೇವಾ ವ್ಯತ್ಯಯದ ಅವಧಿಯಲ್ಲಿ ವಹಿವಾಟುಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದ ಗ್ರಾಹಕರು, ಸಿಸ್ಟಮ್ ಪುನರಾರಂಭಗೊಂಡ ನಂತರ ಅನ್ವಯವಾಗುವಂತೆ ತಮ್ಮ ಸೇವೆಗಳನ್ನು ಪಡೆದುಕೊಳ್ಳಬಹುದು ಎಂದು ಬಳ್ಳಾರಿ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ – ಪತ್ತೆಗಾಗಿ ಮನವಿ

ಪಾಂಡವ ನ್ಯೂಸ್, ಬಳ್ಳಾರಿ : ತೋರಣಗಲ್ಲು ಅಂಜನೇಯ ಸ್ವಾಮಿ ದೇವಸ್ಥಾನದ ಬಳಿ ವಾಸವಿರುವ ಭರತ್ ಕುಮಾರ್ ಜಿ.ಎಸ್ (30 ವರ್ಷ) ಎಂಬುವವರು ನವೆಂಬರ್ 08 ರಂದು ನಾಪತ್ತೆಯಾಗಿದ್ದು, ಈ ಕುರಿತು ತೋರಣಗಲ್ಲು ಪೊಲೀಸ್ ಠಾಣೆಯಲ್ಲಿ ಕುರಿತು ಪ್ರಕರಣ ದಾಖಲಾಗಿದ್ದು, ಅವರ ಪತ್ತೆಗಾಗಿ ಸಹಕರಿಸಬೇಕು ಎಂದು ಠಾಣಾಧಿಕಾರಿಗಳು ಮನವಿ ಮಾಡಿದ್ದಾರೆ.ನಾಪತ್ತೆಯಾದ ವ್ಯಕ್ತಿಯ ವಿವರ : ಎತ್ತರ 5.4 ಅಡಿ, ದುಂಡು ಮುಖ, ಬಿಳಿ ಮೈಬಣ್ಣ, ಬಲಭಾಗದ ಎದೆಯ ಹತ್ತಿರ ಮಚ್ಚೆ ಇರುತ್ತದೆ. ಕನ್ನಡ, ಹಿಂದಿ, ಇಂಗ್ಲಿಷ್ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಬಿಳಿ ಬಣ್ಣದ ಶರ್ಟ್ ಹಾಗೂ ಗ್ರೇ ಕಲರ್ ಪ್ಯಾಂಟ್ ಧರಿಸಿದ್ದರು. ಮೇಲ್ಕಂಡ ಚಹರೆಯುಳ್ಳ ವ್ಯಕ್ತಿಯು ಎಲ್ಲಾದರೂ ಕಂಡುಬಂದಲ್ಲಿ ಅಥವಾ ಮಾಹಿತಿ ದೊರೆತರೆ, ತೋರಣಗಲ್ಲು ಪೊಲೀಸ್ ಠಾಣೆ: 08395–250100, 9480803062, ಸಂಡೂರು ವೃತ್ತದ ಸಿ.ಪಿ.ಐ: 08395–260100, 9480803036, ತೋರಣಗಲ್ಲು ಪಿ.ಎಸ್.ಐ: 9480803010, ಬಳ್ಳಾರಿ ಎಸ್.ಪಿ.: 08392–258300, ಬಳ್ಳಾರಿ ಕಂಟ್ರೋಲ್ ರೂಮ್: 08392–279100 ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಸಂವಿಧಾನ, ಸಂಸದೀಯ ವ್ಯವಸ್ಥೆಯ ಬಗ್ಗೆ ಅರಿವು ಅಗತ್ಯ: ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ

ಪಾಂಡವ ನ್ಯೂಸ್, ವಿಜಯನಗರ : ವಿದ್ಯಾರ್ಥಿಗಳಿಗೆ ಓದು, ಶಿಕ್ಷಣ ಮಾತ್ರ ಮುಖ್ಯವಲ್ಲ; ಭಾರತದ ಸಂವಿಧಾನ ಮತ್ತು ಸಂಸದೀಯ ವ್ಯವಸ್ಥೆಯ ಬಗ್ಗೆ ಅರಿವು ಹೊಂದುವುದು ಮುಖ್ಯವಾಗಿದೆ. ಭವ್ಯ ಭಾರತದ ನಿರ್ಮಾತೃಗಳಾದ ಯುವ ಸಮೂಹ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜ್ಞಾನ ಹೊಂದುವುದು ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರು ಹೇಳಿದರು.



ಅವರು ಇಂದು ಬೆಳಿಗ್ಗೆ ಹೊಸಪೇಟೆ ನಗರದ ಜಿಲ್ಲಾ ಒಳಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾರಕ್ಷತ ಇಲಾಖೆ, ಉನ್ನತ ಶಿಕ್ಷಣ ಇಲಾಖೆಗಳು ಸಂಯುಕ್ತವಾಗಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಆಯೋಜಿಸಿದ ಜಿಲ್ಲಾ ಮಟ್ಟದ ಯುವ ಸಂಸತ್ತು–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳ ವಾಕ್ ಸ್ವಾತಂತ್ರ್ಯ ಹಾಗೂ ಉತ್ತಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅಣಕು ಯುವ ಸಂಸತ್ತು ಕಾರ್ಯಕ್ರಮವು ಸಹಾಯವಾಗುತ್ತದೆ. ಭಾರತದ ಪ್ರಜಾಪ್ರಭುತ್ವದ ಸೌಂದರ್ಯವನ್ನು ನಮ್ಮ ರಾಜಕೀಯ ಹಾಗೂ ಸಂಸದೀಯ ವ್ಯವಸ್ಥೆಯಲ್ಲಿ ಕಾಣುತ್ತೇವೆ. ಯುವ ಸಮೂಹ ವಿದ್ಯಾರ್ಥಿ ಹಂತದಲ್ಲಿಯೇ ಸಕ್ರಿಯವಾಗಿ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಭವಿಷ್ಯದಲ್ಲಿ ಉತ್ತಮ ನಾಯಕತ್ವ ರೂಪುಗೊಳ್ಳಲು ಸಹಾಯವಾಗುತ್ತದೆ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯುವುದರ ಜೊತೆಗೆ ದೇಶ ಕಟ್ಟುವ ದೊಡ್ಡ ಜವಬ್ದಾರಿ ಇದೆ. ಪ್ರತಿಯೊಬ್ಬ ವಿದ್ಯಾರ್ಥಿಯು ನಮ್ಮ ಸಂವಿಧಾನ ನೀಡಿರುವ ಅವಕಾಶಗಳನ್ನು ಬಳಸಿಕೊಂಡು ಜವಬ್ದಾರಿಯುತ ಉತ್ತಮ ನಾಗರೀಕರಾಗಿ ಬೆಳೆಯಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಪ್ರಜಾಪ್ರಭುತ್ವದ ಯಶಸ್ಸು ಕೇವಲ ಚುನಾವಣೆ ಅಥವಾ ಸರ್ಕಾರದ ಆಡಳಿತಕ್ಕೆ ಸೀಮಿತವಾಗಿಲ್ಲ. ಜನರ ಅಭಿಪ್ರಾಯಗಳಿಗೆ ಗೌರವ ನೀಡುವುದು, ಭಿನ್ನಮತಗಳನ್ನು ಪ್ರಜಾಸತ್ತಾತ್ಮಕವಾಗಿ ಚರ್ಚಿಸುವುದು ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಆದ್ಯತೆ ನೀಡುವುದು ಪ್ರಜಾಪ್ರಭುತ್ವದ ನಿಜವಾದ ಆಶಯವಾಗಿದೆ. ಈ ಮೌಲ್ಯಗಳನ್ನು ಯುವಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಪ್ರಜಾಪ್ರಭುತ್ವವನ್ನು ಕೇವಲ ಸರ್ಕಾರದ ಒಂದು ರೂಪವಲ್ಲ, ಸಹಬಾಳ್ವೆಯ ಜೀವನ ವಿಧಾನವೆಂದು ಪ್ರತಿಪಾದಿಸಿದ್ದಾರೆ. ನಾವೆಲ್ಲರೂ ಸಮಾನತೆ, ಸಹೋದರತ್ವ ಮತ್ತು ಒಗ್ಗಟ್ಟಿನಿಂದ ಮುನ್ನಡೆಯಲು ಪ್ರಜಾಪ್ರಭುತ್ವವೇ ಬುನಾದಿಯಾಗಿದೆ ಎಂದು ಹೇಳಿದರು.

ನೆಲ್ಸನ್ ಮಂಡೇಲಾ ಅವರ ಆಶಯದಂತೆ ಶಿಕ್ಷಣ ಮತ್ತು ಯುವಶಕ್ತಿಗೆ ಸಮಾಜ ಹಾಗೂ ಜಗತ್ತನ್ನು ಬದಲಾಯಿಸುವ ಸಾಮರ್ಥ್ಯವಿದೆ. ಮಹಾತ್ಮ ಗಾಂಧೀಜಿಯವರ ರಾಮ ರಾಜ್ಯದ ಕನಸನ್ನು ನನಸು ಮಾಡಲು ಯುವಕರು ಜವಾಬ್ದಾರಿಯುತ ಪ್ರಜೆಗಳಾಗಿ ರೂಪುಗೊಂಡು, ಸದೃಢ ಪ್ರಜಾಪ್ರಭುತ್ವ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಜಯನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗರಿಮಾ ಪನ್ವಾರ್ ಅವರು ಮಾತನಾಡಿ, ಭಾರತೀಯ ಸಂವಿಧಾನದ ಪ್ರಸ್ತಾವನೆಯು ಅತ್ಯಂತ ಮೌಲ್ಯಯುತವಾಗಿದೆ. ಮತ್ತು ಅದರಲ್ಲಿ ಅಳವಡಿಸಿರುವ ಪ್ರತಿ ಶಬ್ದಯು ಭಾರತದ ಬಲಿಷ್ಠತೆಯನ್ನು, ಉತ್ಕೃಷ್ಟತೆಯನ್ನು ಮತ್ತು ಗೌರವನ್ನು ಎತ್ತಿ ತೋರಿಸುತ್ತದೆ. ವ್ಯಕ್ತಿಯ ಪರಿಪೂರ್ಣ ವ್ಯಕ್ತಿತ್ವ ರೂಪಗೊಳ್ಳಲು ಅಗತ್ಯವಿರುವ ಎಲ್ಲಾ ಅಂಶ ಮತ್ತು ಅಗತ್ಯಗಳನ್ನು ವಿಧಿಗಳ ಸ್ವರೂಪದಲ್ಲಿ ಭಾರತದ ಸಂವಿಧಾನದಲ್ಲಿ ಅಳವಡಿಸಲಾಗಿದೆ ಎಂದರು.

ವಿದ್ಯಾರ್ಥಿ ಹಂತದಲ್ಲಿಯೇ ಸಂವಿಧಾನವನ್ನು ಅರ್ಥ ಮಾಡಿಕೊಳ್ಳುವುದರಿಂದ ಜೀವನದಲ್ಲಿ ಅನ್ಯಾಯ, ಶೋಷಣೆ, ತಾರತಮ್ಯ ಹಾಗೂ ಅಸಮಾನತೆಗಳನ್ನು ಸಮರ್ಥವಾಗಿ ತೊಲಗಿಸಿ ಸುಂದರವಾದ ಬದುಕನ್ನು ಕಟ್ಟಿಕೊಳ್ಳಲು ಮತ್ತು ಸಮಾನ ಅವಕಾಶಗಳನ್ನು ಪಡೆದುಕೊಳ್ಳಲು ಯುವಕ–ಯುವತಿಯರಿಗೆ ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಅಣಕು ಸಂಸತ್ತಿನ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಜಿಲ್ಲೆಯ ಜ್ವಲಂತ ಸಮಸ್ಯೆಗಳ ಬಗ್ಗೆ, ಸ್ಥಳೀಯ ಸರ್ಕಾರಗಳ ಜವಬ್ದಾರಿ ಮತ್ತು ಮೂಲ ಕಾರ್ಯಗಳ ಬಗ್ಗೆ ಅರಿವು ಮೂಡುತ್ತದೆ. ಸಣ್ಣ ಮಟ್ಟದ ಸಮಸ್ಯೆಗಳನ್ನು ಪ್ರಶ್ನಿಸಿ, ಪರಿಹರಿಸುವ ಮೂಲಕ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುತ್ತದೆ ಎಂದರು.ಸಮಾಜದಲ್ಲಿ ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು ದೊರೆಯಬೇಕು. ಜಾತಿ, ಧರ್ಮ, ಲಿಂಗ ಸೇರಿದಂತೆ ಯಾವುದೇ ಆಧಾರದ ಮೇಲೆ ತಾರತಮ್ಯ ಇರಬಾರದು. ಸಮಾಜದಲ್ಲಿ ಸಮಾನತೆ ನೆಲೆಸಿದಾಗ ಮಾತ್ರ ಎಲ್ಲರಿಗೂ ಶಿಕ್ಷಣ, ಉದ್ಯೋಗ ಹಾಗೂ ಅಭಿವೃದ್ಧಿಯ ಅವಕಾಶಗಳು ಲಭ್ಯವಾಗಲು ಸಾಧ್ಯ. ವಿದ್ಯಾರ್ಥಿಗಳು ತಮ್ಮ ಹಕ್ಕುಗಳ ಜೊತೆಗೆ ಸಮಾಜದ ಬಗೆಗಿನ ಕರ್ತವ್ಯಗಳನ್ನೂ ಅರಿತುಕೊಳ್ಳಬೇಕು ಎಂದು ತಿಳಿಸಿದರು.

ಅನಕ್ಷರತೆ, ಬಡತನ, ಮೂಢನಂಬಿಕೆ ಹಾಗೂ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಗಳು ದೇವದಾಸಿಯಂತಹ ಅನಿಷ್ಟ ಪದ್ಧತಿಗಳು ಮುಂದುವರಿಯಲು ಪ್ರಮುಖ ಕಾರಣಗಳಾಗಿವೆ. ಸಮಾಜದಿಂದ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಬೇಕು. ಈ ಪದ್ಧತಿಯಿಂದ ನೊಂದ ಮಹಿಳೆಯರಿಗೆ ಗೌರವಯುತ ಬದುಕು, ಸಾಮಾಜಿಕ ಭದ್ರತೆ ಹಾಗೂ ಸಮಾನ ಹಕ್ಕುಗಳು ದೊರೆಯುವಂತಾಗಬೇಕು.

ವಿದ್ಯಾರ್ಥಿಗಳು ಇಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧ ಜಾಗೃತಿ ಮೂಡಿಸುವ ಹೊಣೆಗಾರಿಕೆ ಹೊಂದಿದ್ದಾರೆ ಎಂದು ಹೇಳಿದ ಅವರು, ವಿದ್ಯಾರ್ಥಿಗಳು ಕೇವಲ ಪ್ರೇಕ್ಷಕರಾಗಿ ಉಳಿಯದೆ, ಪ್ರತಿಯೊಂದು ವಿಷಯದ ಕುರಿತು ಸಕ್ರಿಯವಾಗಿ ಚರ್ಚಿಸಿ ತಮ್ಮದೇ ಆದ ವಿಚಾರಗಳು, ಅಭಿಪ್ರಾಯಗಳು ಹಾಗೂ ಪರಿಹಾರೋಪಾಯಗಳನ್ನು ಮಂಡಿಸಬೇಕು ಎಂದರು.

ಭವಿಷ್ಯದಲ್ಲಿ ಐಎಎಸ್, ಪೊಲೀಸ್, ಸೇನೆ, ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಕನಸು ಹೊಂದಿರುವ ವಿದ್ಯಾರ್ಥಿಗಳಿಗೆ ಸಂವಿಧಾನದ ಮೌಲ್ಯಗಳ ಅರಿವು ಅತ್ಯಂತ ಅಗತ್ಯ. ವಿದ್ಯಾರ್ಥಿ ಜೀವನದಲ್ಲಿಯೇ ಪ್ರಜಾಪ್ರಭುತ್ವದ ಆಶಯಗಳು, ಸಾಮಾಜಿಕ ನ್ಯಾಯ ಹಾಗೂ ನಾಗರೀಕ ಜವಾಬ್ದಾರಿಗಳನ್ನು ಮೈಗೂಡಿಸಿಕೊಂಡರೆ ಭವಿಷ್ಯದಲ್ಲಿ ಜವಾಬ್ದಾರಿಯುತ ನಾಗರೀಕರಾಗಿ ರೂಪುಗೊಳ್ಳಲು ಸಾಧ್ಯ ಎಂದು ಆಶಯ ವ್ಯಕ್ತಪಡಿಸಿದರು.ಇವತ್ತಿನ ಈ ಅಣಕು ಸಂಸತ್ತು ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಪ್ರತಿ ತಾಲ್ಲೂಕಿನಿಂದ 45 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 224 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಇದು ಕರ್ನಾಟಕ ವಿಧಾನ ಸಭೆಯ 224 ವಿಧಾನಸಭಾ ಸದಸ್ಯರ ಪ್ರಾತಿನಿಧಿಕ ಘಟಕದಂತೆ ಕಾರ್ಯ ನಿರ್ವಹಿಸುತ್ತಿದೆ. ಎಲ್ಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ಅವಕಾಶವನ್ನು ಸದುಪಯೋಗ ಮಾಡಿಕೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು ಗರಿಮಾ ಪನ್ವಾರ್ ತಿಳಿಸಿದರು.

ಸಭೆಯಲ್ಲಿ ವಿಜಯನಗರ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಗುಜ್ಜಲ್ ನಾಗರಾಜ ಅವರು ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಹೊಸಪೇಟೆ ತಾಲ್ಲೂಕು ಸಹಾಯಕ ನಿರ್ದೇಶಕಿ ನಜಿಮಾ ಭಾನು ಸಂವಿಧಾನದ ಪೀಠಿಕೆ ವಚನ ಮಾಡಿದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ವೈ.ಎ.ಕಾಳೆ ಅವರು ಸ್ವಾಗತಿಸಿದರು. ವೇದಿಕೆಯಲ್ಲಿ ಶಾಲಾ ಶಿಕ್ಷ

ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಶಿಕ್ಷಕರು ಶ್ರಮಿಸಬೇಕು: ಸಚಿವ ಮಧು ಬಂಗಾರಪ್ಪ



ಪಾಂಡವ ನ್ಯೂಸ್, ಧಾರವಾಡ : ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಮೂಲಕ ಮಕ್ಕಳ ಭವಿಷ್ಯ ರೂಪಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ವಿಶೇಷ ಕಾಳಜಿ ವಹಿಸಿ ಕಾರ್ಯನಿರ್ವಹಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಎಸ್. ಮಧು ಬಂಗಾರಪ್ಪ ಅವರು ಹೇಳಿದರು.

ಅವರು ಇಂದು (ನ.13) ಭಾರತೀಯ ತಂತ್ರಜ್ಞಾನ ಸಂಸ್ಥೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ 2026–27 ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಗುಣಾತ್ಮಕ ಫಲಿತಾಂಶ ಸುಧಾರಣೆಗಾಗಿ ಮಿಷನ್ 60+ ಕಾರ್ಯಕ್ರಮದ ಧಾರವಾಡ, ಹಾವೇರಿ ಹಾಗೂ ಗದಗ ವಿಭಾಗ ಮಟ್ಟದ ಸಂಪನ್ಮೂಲ ಶಿಕ್ಷಕರ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ಎಲ್‌ಕೆಜಿಯಿಂದ ಪಿ.ಯು.ಸಿ ತರಗತಿವರೆಗೆ ಒಂದೇ ಆವರಣದಲ್ಲಿ

ಮೂಲಸೌಕರ್ಯ ಹಾಗೂ ಅಗತ್ಯ ಶಿಕ್ಷಕರೊಂದಿಗೆ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಲಾಗಿದೆ. ಇದು ಮಕ್ಕಳ ಹಿತದೃಷ್ಟಿಯಿಂದ ಕೈಗೊಂಡಿರುವ ಮಹತ್ವದ ನಿರ್ಧಾರವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ಇಂಗ್ಲಿಷ್ ಕಲಿಕೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಖಾಸಗಿ ಶಾಲೆಗಳಿಗೆ ಸರಿಸಮನಾದ ಶಿಕ್ಷಣ ನೀಡಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಕಳೆದ ಬಾರಿ ಸಂಪನ್ಮೂಲ ಶಿಕ್ಷಕರ ಸಹಯೋಗದೊಂದಿಗೆ ನಡೆಸಿದ ಕಾರ್ಯಾಗಾರಗಳಿಂದ ಶೇ.98.2 ರಷ್ಟು ಉತ್ತಮ ಫಲಿತಾಂಶ ಬಂದಿದೆ. ಇದೇ ಮಾದರಿಯ ಕಾರ್ಯಾಗಾರಗಳನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮುಂಚಿತವಾಗಿ ಆರಂಭಿಸಿ, ಉತ್ತಮ ಶಿಕ್ಷಕರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಬಳಸಿಕೊಳ್ಳಬೇಕು. ಮಕ್ಕಳ ಕಲಿಕಾ ಸಾಮರ್ಥ್ಯ, ವಿವಿಧ ಹಂತಗಳ ಕಲಿಕಾ ಶೈಲಿ ಹಾಗೂ ಪರಿಣಾಮಕಾರಿ ಬೋಧನಾ ವಿಧಾನಗಳ ಕುರಿತು ಕಾರ್ಯಾಗಾರಗಳಲ್ಲಿ ಚರ್ಚಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಬೇಕು ಎಂದು ಅವರು ತಿಳಿಸಿದರು.

ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆಗೆ ಮಾದರಿ ಪ್ರಶ್ನೆಪತ್ರಿಕೆಗಳು ಹಾಗೂ ಪ್ರಶ್ನೆ ಬ್ಯಾಂಕ್‌ಗಳು ಸಹಕಾರಿಯಾಗಿವೆ. ಮಾದರಿ ಪ್ರಶ್ನೆಪತ್ರಿಕೆಗಳ ಆಧಾರದ ಮೇಲೆ ಮಕ್ಕಳು ಅಭ್ಯಾಸ ಮಾಡುವುದರಿಂದ ಪಠ್ಯಪುಸ್ತಕದ ಪುನರಾವರ್ತನೆಯೂ ಸುಲಭವಾಗುತ್ತದೆ ಎಂಬ ಅಭಿಪ್ರಾಯವನ್ನು ಪೋಷಕರು ಮತ್ತು ವಿದ್ಯಾರ್ಥಿಗಳು ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಮಕ್ಕಳ ಕಲಿಕೆಗೆ ಹೆಚ್ಚಿನ ಒತ್ತು ನೀಡಿ, ಶೇ.100 ರಷ್ಟು ಫಲಿತಾಂಶ ಸಾಧಿಸಲು ಪ್ರಯತ್ನಿಸಬೇಕು. ಕಳೆದ ಬಾರಿ ಶೇ.40 ರಷ್ಟು ಫಲಿತಾಂಶದ ಗುರಿ ಸಾಧಿಸಿದ್ದು, ಈ ಬಾರಿ ಶೇ.60 ರಷ್ಟು ಫಲಿತಾಂಶ ಸಾಧಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಪೋಷಕರು ಮತ್ತು ಶಿಕ್ಷಕರ ನಡುವೆ ಉತ್ತಮ ಬಾಂಧವ್ಯ ಹಾಗೂ ನಿರಂತರ ಸಂವಹನ ಇರಬೇಕು. ಈ ಉದ್ದೇಶದಿಂದ ಮೆಗಾ ಪೋಷಕ–ಶಿಕ್ಷಕರ ಸಭೆಗಳನ್ನು ಆಯೋಜಿಸಲಾಗುತ್ತಿದೆ. ಪೋಷಕರು ಮಕ್ಕಳ ಶಿಕ್ಷಣದ ಜವಾಬ್ದಾರಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಶಿಕ್ಷಕರು ಶಾಲೆಯಲ್ಲಿ ಕಲಿಸಿದ ಪಾಠಗಳನ್ನು ಮಕ್ಕಳು ಮನೆಯಲ್ಲಿ ಮುಂದುವರಿಸಲು ಪೋಷಕರು ಸಹಕರಿಸಬೇಕು ಎಂದರು.

ಮಕ್ಕಳಲ್ಲಿ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳು, ಶಿಸ್ತು, ತಂದೆ–ತಾಯಿಯರ ಬಗ್ಗೆ ಗೌರವ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ನೈತಿಕ ಶಿಕ್ಷಣಕ್ಕೂ ಆದ್ಯತೆ ನೀಡಬೇಕು. ಮಕ್ಕಳಲ್ಲಿರುವ ಪಠ್ಯೇತರ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವೂ ನಡೆಯಬೇಕು ಎಂದು ಅವರು ಹೇಳಿದರು.

ಶಿಕ್ಷಕರ ಮೇಲಿರುವ ಕೆಲಸದ ಒತ್ತಡದ ಬಗ್ಗೆ ಇಲಾಖೆಗೆ ಅರಿವಿದೆ. ಶಿಕ್ಷಕರಿಗೆ ತೊಂದರೆಯಾಗದಂತೆ ಹಾಗೂ ಮಕ್ಕಳ ಕಲಿಕೆಗೆ ಯಾವುದೇ ಅಡ್ಡಿಯಾಗದಂತೆ ಅಧಿಕಾರಿಗಳು ಮತ್ತು ಶಿಕ್ಷಕರ ಸಹಕಾರದೊಂದಿಗೆ ಸ್ನೇಹಪರವಾಗಿ ಕಾರ್ಯನಿರ್ವಹಿಸಲಾಗುವುದು. ಅತಿಥಿ ಶಿಕ್ಷಕರು ಹಾಗೂ ಖಾಯಂ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಸುಮಾರು 16 ಸಾವಿರದಿಂದ 18 ಸಾವಿರ ಹುದ್ದೆಗಳನ್ನು ಮುಂದಿನ ಶೈಕ್ಷಣಿಕ ವರ್ಷದೊಳಗೆ ಭರ್ತಿ ಮಾಡಲು ಹಾಗೂ ಸಿಇಟಿ ನಡೆಸಲು ಕ್ರಮ ಕೈಗೊಳ್ಳಲಾಗುವುದು. ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನಗಳ ಬಗ್ಗೆಯೂ ಬೇಡಿಕೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಕಳೆದ ಬಾರಿ ಬೆಳಗಾವಿ ವಿಭಾಗವು ರಾಜ್ಯಮಟ್ಟದಲ್ಲಿ ಮೊದಲ ಸ್ಥಾನ ಪಡೆದಿರುವುದಕ್ಕೆ ಶಿಕ್ಷಕರು ಹಾಗೂ ಅಧಿಕಾರಿಗಳಿಗೆ ಸಚಿವರು ಅಭಿನಂದನೆ ಸಲ್ಲಿಸಿದರು. ಶಿಕ್ಷಣ ಕ್ಷೇತ್ರದ ಪ್ರಗತಿಗೆ ಶಿಕ್ಷಕರ ಸಹಕಾರ ಅತ್ಯಂತ ಮುಖ್ಯವಾಗಿದ್ದು, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸಬೇಕು ಎಂದು ಅವರು ಹೇಳಿದರು.

ನವಲಗುಂದ ವಿಧಾನ ಸಭೆ ಶಾಸಕರಾದ ಎನ್. ಎಚ್. ಕೋನರೆಡ್ಡಿ ಅವರು ಮಾತನಾಡಿ. ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಕರ್ನಾಟಕ ಸರ್ಕಾರ ಹೆಚ್ಚಿನ ಅನುದಾನ ವೆಚ್ಚ ಮಾಡಲು ಸಿದ್ಧವಿದ್ದು, ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸುವ ಮೂಲಕ ರಾಜ್ಯದ ಶೈಕ್ಷಣಿಕ ಶ್ರೇಯಾಂಕ ಸುಧಾರಿಸಲು ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ವಿಶೇಷ ಪ್ರಯತ್ನ ಮಾಡಬೇಕು ಎಂದು ಅವರು ಹೇಳಿದರು.

ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಅವರು ಹೆಚ್ಚಿನ ಹಣ ವೆಚ್ಚ ಮಾಡಲು ಸಿದ್ಧರಿದ್ದಾರೆ. ಈ ನಿಟ್ಟಿನಲ್ಲಿ ಶಿಕ್ಷಣದ ಗುಣಮಟ್ಟದ ಕುರಿತು ಸರಿಯಾದ ಪ್ರತಿಕ್ರಿಯೆ ಹಾಗೂ ಫಲಿತಾಂಶದ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದು ಕಾರ್ಯಾಗಾರದ ಪ್ರಮುಖ ಉದ್ದೇಶವಾಗಬೇಕು.

ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಉಳಿಯುತ್ತಿಲ್ಲ. ಹೆಚ್ಚಿನ ಅಂಕಗಳಿಸುವ ವಿದ್ಯಾರ್ಥಿಗಳು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಾಮಾನ್ಯ ಹಾಗೂ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೂ ಉತ್ತಮ ಶಿಕ್ಷಣ ನೀಡಿ ಅವರನ್ನು ಪ್ರತಿಭಾವಂತರನ್ನಾಗಿ ರೂಪಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು.

ಕರ್ನಾಟಕ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಟಾಟಾ ಸಂಸ್ಥೆ, ಐಐಟಿ ಹಾಗೂ ತ್ರಿಬಲ್ ಐಐಟಿ ಸೇರಿದಂತೆ ಹಲವು ಪ್ರಮುಖ ಶಿಕ್ಷಣ ಸಂಸ್ಥೆಗಳಿವೆ. ಇಷ್ಟೊಂದು ಶೈಕ್ಷಣಿಕ ಸಂಸ್ಥೆಗಳಿರುವ ಧಾರವಾಡದ ಗೌರವವನ್ನು ಮತ್ತಷ್ಟು ಹೆಚ್ಚಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಧಾರವಾಡ ಸೇರಿದಂತೆ ಮೂರು ಜಿಲ್ಲೆಗಳ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಅವರು ಹೇಳಿದರು.

ಸಾಹಿತ್ಯ ಬಿಡುಗಡೆ: ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು 60+ ಸಾಹಿತ್ಯ ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತ ಈಶ್ವರ ಉಳ್ಳಾಗಡ್ಡಿ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಉಮೇಶ ಬೊಮ್ಮಕ್ಕನವರ ವಂದಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ, ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕ ಭರತ್. ಎಸ್, ಐ.ಐ.ಟಿ ನಿರ್ದೇಶಕ ವೆಂಕಪ್ಪಯ್ಯ ಆರ್. ದೇಸಾಯಿ, ಯೋಜನಾ ಸಮನ್ವಯ ಅಧಿಕಾರಿ ಎಮ್. ಎಸ್. ಹುಡೇದಮನಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿಭಾಗ ಮಟ್ಟದ ಸಂಪನ್ಮೂಲ ಶಿಕ್ಷಕರ ಕಾರ್ಯಾಗಾರದಲ್ಲಿ ಧಾರವಾಡ, ಹಾವೇರಿ ಹಾಗೂ ಗದಗ ಜಿಲ್ಲೆಯ ನೋಡಲ್ ಅಧಿಕಾರಿಗಳು, ಶಾಲಾ ಶಿಕ್ಷಕರು ಭಾಗವಹಿಸಿದ್ದರು.

ಅಪರಿಚಿತ ವ್ಯಕ್ತಿ ಸಾವು

ಪಾಂಡವ ನ್ಯೂಸ್, ಹುಬ್ಬಳ್ಳಿ : ಹಾವೇರಿ ಕರ್ಜಗಿ ರೈಲ್ವೆ ನಿಲ್ದಾಣಗಳ ಮಧ್ಯೆ ನಾಗೇಂದ್ರ ಮಟ್ಟಿ ಹೊಸ ನಗರ ಹತ್ತಿರ ರೈಲುಗಾಡಿಗೆ ಸಿಲುಕಿ ಅಪರಿಚಿತ ವ್ಯಕ್ತಿಯೊಬ್ಬರು ನವೆಂಬರ್ 7 ರಂದು ಮೃತಪಟ್ಟಿದ್ದಾರೆ.ಅಪರಿಚಿತ ವ್ಯಕ್ತಿಯು ಸುಮಾರು 30– 35 ವರ್ಷ ವಯಸ್ಸಿನವನಾಗಿದ್ದು, 5.5' ಅಡಿ ಎತ್ತರ, ದುಂಡು ಮುಖ, ಗೋಧಿ ಮೈಬಣ್ಣ, ಮೈಯಿಂದ ಸದೃಢ ಶರೀರ, ತಲೆಯಲ್ಲಿ ಕಪ್ಪು ಕೂದಲು, ಸಣ್ಣ ಮೀಸೆ, ಗಡ್ಡ ಬಿಟ್ಟಿರುತ್ತಾನೆ. ಬಿಳಿ ಬಣ್ಣದ ಚಿಕ್ಕ ಡಿಸೈನ್ ಇರುವ ತುಂಬು ತೋಳಿನ ಶರ್ಟ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಕಡು ನೀಲಿ ಬಣ್ಣದಕಪ್ಪು ಪಟ್ಟಿಯಿರುವ ಇನ್ನರ್ ವೇರ್, ಗಿಳಿ ಬಣ್ಣದ ಲೈಲಾನ್ ಬೆಲ್ಟ್ ಹಾಗೂ ಎಡಗೈ ಮೊಣಕೈ ಕೆಳಗೆ ಆಂಗ್ಲ ಭಾಷೆಯಲ್ಲಿ ಅಕ್ಷಯ ಎಂದು ಅಚ್ಚೆ ಹಾಕಿಸಿಕೊಂಡಿದ್ದಾನೆ.ಅಪರಿಚಿತ ವ್ಯಕ್ತಿಯ ವಾರಸುದಾರರು ಯಾರಾದರೂ ಇದ್ದರೆ ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0836– 2364751 ಮತ್ತು 9480802126 ಸಂಪರ್ಕಿಸುವಂತೆ ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಬಾಕು ಮುಕ್ತ ಯುವ ಅಭಿಯಾನ 4.0: ಪ್ರತಿಜ್ಞಾ ವಿಧಿ ಸ್ವೀಕರಿಸಿ ಪ್ರಮಾಣ ಪತ್ರ ಪಡೆಯಲು ಮನವಿ

ಪಾಂಡವ ನ್ಯೂಸ್, ಚಿತ್ರದುರ್ಗ : ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಹಮ್ಮಿಕೊಳ್ಳಲಾಗಿರುವ 'ತಂಬಾಕು ಮುಕ್ತ ಯುವ ಅಭಿಯಾನ 4.0' ಅನ್ವಯ, ಜಿಲ್ಲೆಯ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಆಲೈನ್ ಮೂಲಕ ಪ್ರತಿಜ್ಞಾ ವಿಧಿ ಸ್ವೀಕರಿಸಿ ಪ್ರಮಾಣ ಪತ್ರ ಪಡೆದುಕೊಳ್ಳುವಂತೆ ಕೋರಿದೆ.ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಂ.ಸಿ. ಸುನೀಕುಮಾರ್ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣಾಧಿಕಾರಿ ಡಾ. ಗಿರೀಶ್ ಅವರ ಕೋರಿಕೆಯಂತೆ, ಜಿಲ್ಲೆಯ ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಎಲ್ಲಾ ಸರ್ಕಾರಿ ಇಲಾಖೆಗಳ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮೀಣ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸಾರ್ವಜನಿಕರು ಈ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು.ಆಸಕ್ತರು ಅಧಿಕೃತ ಜಾಲತಾಣದ ಲಿಂಕ್ https://pledge.mygov.in/say-no-to-tobacco-2026/ ಬಳಸಿಕೊಂಡು ತಂಬಾಕು ವಿರೋಧಿ ಪ್ರತಿಜ್ಞೆ ಸ್ವೀಕರಿಸಿ, ತಮ್ಮ ಪ್ರಮಾಣ ಪತ್ರವನ್ನು ಡೌಲೋಡ್ ಮಾಡಿಕೊಂಡು ಅಲೋಡ್ ಮಾಡುವ ಮೂಲಕ ಅಭಿಯಾನ ಯಶಸ್ವಿಗೊಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸ್ಥಿರಾಸ್ತಿಗಳ ಮಾರುಕಟ್ಟೆ ದರ ತಾತ್ಕಾಲಿಕ ಪರಿಷ್ಕರಣೆ – ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನ

ಪಾಂಡವ ನ್ಯೂಸ್, ಚಿತ್ರದುರ್ಗ : 2026–27ನೇ ಸಾಲಿಗೆ ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ ಸ್ಥಿರಾಸ್ತಿಗಳ ಮಾರುಕಟ್ಟೆ ದರಗಳನ್ನು ತಾಲ್ಲೂಕು ಮಾರುಕಟ್ಟೆ ಮೌಲ್ಯಮಾಪನ ಉಪಸಮಿತಿ ಸಭೆಯಲ್ಲಿ ತಾತ್ಕಾಲಿಕವಾಗಿ ಪರಿಷ್ಕರಿಸಲಾಗಿದ್ದು, ಸಾರ್ವಜನಿಕರಿಂದ ಆಪೇಕ್ಷಣೆಗಳ ಆಹ್ವಾನಿಸಲಾಗಿದೆ.

ಪರಿಷ್ಕರಿಸಿದ ಸ್ಥಿರಾಸ್ತಿ ಮಾರುಕಟ್ಟೆ ದರಗಳ ಕರಡು ಪ್ರತಿಯನ್ನು ಸಾರ್ವಜನಿಕರ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳಿಗಾಗಿ ಕಚೇರಿಯ ಸೂಚನಾ ಫಲಕದಲ್ಲಿ ನವೆಂಬರ್ 14ರಂದು ಪ್ರಕಟಿಸಲಾಗಿದೆ. ಈ ದರಗಳ ಕುರಿತು ಸಾರ್ವಜನಿಕರಿಂದ ಯಾವುದೇ ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳಿದ್ದಲ್ಲಿ, ಸೂಕ್ತ ದಾಖಲೆಗಳೊಂದಿಗೆ 2026ರ ಡಿಸೆಂಬರ್ 02 ರೊಳಗಾಗಿ ಚಿತ್ರದುರ್ಗ ಉಪನೋಂದಣಿ ಅಧಿಕಾರಿಗಳ ಕಚೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬೇಕು ಎಂದು ಚಿತ್ರದುರ್ಗ ಉಪನೋಂದಣಾಧಿಕಾರಿಗಳು ಹಾಗೂ ತಾಲ್ಲೂಕು ಮಾರುಕಟ್ಟೆ ಮೌಲ್ಯಮಾಪನ ಉಪ ಸಮಿತಿಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ನವೆಂಬರ್ 16ರಿಂದ 24ರವರೆಗೆ PLI, RPLI ವಿಮಾ ಸೇವೆ ಸ್ಥಗಿತ

ಪಾಂಡವ ನ್ಯೂಸ್, ಗದಗ: ಭಾರತೀಯ ಅಂಚೆ ಇಲಾಖೆಯ ಅಂಚೆ ಜೀವ ವಿಮೆ (PLI) ಮತ್ತು ಗ್ರಾಮೀಣ ಅಂಚೆ ಜೀವ ವಿಮೆ (RPLI) ಸೇವೆಗಳನ್ನು ನೂತನ ಇನ್ಶೂರೆನ್ಸ್ ಮ್ಯಾನೇಜ್‌ಮೆಂಟ್ ಸೊಲ್ಯೂಷನ್ (IMS) ತಂತ್ರಾಂಶಕ್ಕೆ ವರ್ಗಾಯಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. ಹಾಗಾಗಿ ನವೆಂಬರ್ 16ರಿಂದ 24ರವರೆಗೆ ಕಐಖ ಮತ್ತು ಖಿಕಐಖ ವಿಮಾ ಸೇವೆಗಳು ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿವೆ ಎಂದು ಗದಗ ವಿಭಾಗೀಯ ಅಂಚೆ ಅಧೀಕ್ಷಕ ಎಸ್.ಎಸ್.ಶಿರಹಟ್ಟಿ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.ಈ ಹಿನ್ನೆಲೆಯಲ್ಲಿ ಗ್ರಾಹಕರು ತಮ್ಮ ಬಾಕಿ ಇರುವ ವಿಮಾ ಕಂತುಗಳನ್ನು ನವೆಂಬರ್ 15, 2026ರೊಳಗೆ ಪಾವತಿಸುವಂತೆ ಅಂಚೆ ಇಲಾಖೆ ಸೂಚಿಸಿದೆ. ನವೆಂಬರ್ 25ರಿಂದ ಎರಡೂ ವಿಮಾ ಸೇವೆಗಳು ಪುನರಾರಂಭಗೊಳ್ಳಲಿವೆ.ಹೆಚ್ಚಿನ ಮಾಹಿತಿಗಾಗಿ ಗ್ರಾಹಕರು ತಮ್ಮ ಸಮೀಪದ ಅಂಚೆ ಕಚೇರಿಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ರಾಜ್ಯದಾದ್ಯಂತ ಶಾಲೆಗಳಲ್ಲಿ ಬಿಸಿಊಟ ಬಂದ್ : ಹಲಗಿ ಸುರೇಶ

ಪಾಂಡವ ನ್ಯೂಸ್, ಹೂವಿನಹಡಗಲಿ : ಬಿಸಿಊಟ ತಯಾರಕರ ಕೆಲಸಕ್ಕೆ ಕುತ್ತು ತರಲು ಯತ್ನಿಸುತ್ತಿರುವುದರ ವಿರುದ್ಧ ರಾಜ್ಯದಾದ್ಯಂತ ಶಾಲೆಗಳಲ್ಲಿ ಬಿಸಿಊಟ ಬಂದ್ ಮಾಡಿ ಪ್ರತಿಭಟನೆ ಮಾಡಲಾಗುವುದು ಎಂದು ಎಐಟಿಯುಸಿ ಸಂಯೋಜಿತ ಬಿಸಿಯೂಟ ತಯಾರಕರ ಫೆಡರೇಶನ್ ನ ರಾಜ್ಯ ಮಂಡಳಿ ಸದಸ್ಯಕಾಂ ಹಲಗಿ ಸುರೇಶ ತಿಳಿಸಿದ್ದಾರೆ.ರಾಜ್ಯದ ಶಿಕ್ಷಕರ ಸಂಘವೊಂದು ಮಧ್ಯಾಹ್ನ ಉಪಹಾರ ಯೋಜನೆ ರಾಜ್ಯ ನಿರ್ದೇಶಕರಿಗೆ ಮನವಿ ಸಲ್ಲಿಸಿ ಬಿಸಿಊಟ ತಯಾರಿಕೆಯಲ್ಲಿ ಶಿಕ್ಷಕರು ಗಮನ ಕೊಡಬೇಕಾಗಿರುವುದನ್ನು ಬಿಡಿಸಲು ರಾಜ್ಯಾದ್ಯಂತ ಬಿಸಿಊಟ ತಯಾರಿಕೆಯನ್ನು ಕ್ಲಸ್ಟರ್ ಕಿಚನ್ ಸೆಂಟರ್ ಮೂಲಕ ಎನ್ ಜಿ ಓ / ಖಾಸಗಿ ಸಂಘ ಸಂಸ್ಥೆಗಳಿಗೆ ವಹಿಸುವಂತೆ ಕೋರಿದ್ದರಿಂದ ಅದನ್ನೇ ನೆಪವಾಗಿಟ್ಟುಕೊಂಡು ಮಧ್ಯಾಹ್ನ ಉಪಹಾರ ನಿರ್ದೇಶಕರು, ಕಳೆದ 25 ವರ್ಷಗಳಿಂದ ಕಡಿಮೆ ವೇತನದಲ್ಲಿ ಬಿಸಿಊಟ ತಯಾರಕರಾಗಿ ಕೆಲಸ ನಿರ್ವಹಿಸುತ್ತಿರುವ ಬಿಸಿಊಟ ತಯಾರಕ ಮಹಿಳೆಯರನ್ನು ಕೆಲಸದಿಂದ ಬಿಡಿಸಿ ಖಾಸಗಿ ಸಂಸ್ಥೆಗಳಿಗೆ ಕೊಡುವ ಹುನ್ನಾರ ನಡೆಸಿದ್ದಾರೆ ಎಂದು ಹಲಗಿ ಸುರೇಶ ಆರೋಪಿಸಿದ್ದಾರೆ.ರಾಜ್ಯಾದ್ಯಂತ ಬಿಸಿಯೂಟ ತಯಾರಕರು ತಮ್ಮ ಕೆಲಸವನ್ನು ಉಳಿಸಿಕೊಳ್ಳುವುದಕ್ಕಾಗಿ ಶಾಲೆಗೆ ಹೋಗದೆ ಅಡುಗ

ಇತಿಹಾಸದ ಮೌನಗಳಿಗೂ ಹೇಳುವುದಿದೆ.....

ಸಾಕ್ಷಿ ಗುರುರಾಜ ಕತ್ತಿ

ಇತಿಹಾಸವೆಂದರೆ ಕೇವಲ ಗುಡ್ಡಗಳ ಮಣ್ಣಿನ ಪದರಗಳಲ್ಲಿ ಹುದುಗಿರುವ ಅವಶೇಷಗಳಾಗಲಿ, ರಾಜಮನೆತನಗಳ ಆಳ್ವಿಕೆಯ ವೈಭವದ ಕಥನಗಳಾಗಲಿ ಅಥವಾ ಗತಕಾಲದ ಘಟನೆಗಳು ಪುಸ್ತಕಗಳ ಪುಟಗಳಲ್ಲಿ ಅಕ್ಷರಗಳಾಗಿ ಉಳಿದಿರುವುದಾಗಲಿ ಅಷ್ಟೇ ಅಲ್ಲ. ಕಾಲದ ಸುಳಿಯಲ್ಲಿ ಎಷ್ಟೋ ಸಾಮ್ರಾಜ್ಯಗಳು ಕಣ್ಮರೆಯಾಗಿರಬಹುದು, ಅದೆಷ್ಟೋ ಕಥನಗಳು ಕಾಲಗರ್ಭದಲ್ಲಿ ಮರೆಯಾಗಿರಬಹುದು; ಆದರೆ ಆ ಕಾಲದ ಉಸಿರನ್ನು ಇಂದಿಗೂ ತನ್ನೊಳಗೆ ಕಾಯ್ದಿಟ್ಟಿರುವುದು ಶಿಲೆಗಳು, ಅವುಗಳ ಮೇಲಿನ ಕೆತ್ತನೆಗಳು ಮತ್ತು ಕಲಾತ್ಮಕ ಅಭಿವ್ಯಕ್ತಿಗಳು. ಮಾತಿಲ್ಲದೆ ಮೌನವಾಗಿ ನಿಂತಿರುವ ಆ ಶಿಲೆಗಳು ತಮ್ಮ ಒಡಲೊಳಗೆ ಒಂದು ಸಾಮ್ರಾಜ್ಯದ ವೈಭವವನ್ನೇ ಹೊತ್ತು ನಿಂತಿವೆ. ಅವುಗಳ ಮೇಲಿನ ಪ್ರತಿಯೊಂದು ಕೆತ್ತನೆಯೂ ಒಂದೊಂದು ಕಥೆಯಾದರೆ, ಪ್ರತಿಯೊಂದು ಶಿಲ್ಪವೂ ಅಂದಿನ ಜನಜೀವನ, ಸಂಸ್ಕೃತಿ, ಪರಂಪರೆ, ನಂಬಿಕೆ ಹಾಗೂ ಕಲಾಪ್ರೌಢಿಮೆಯ ಅನಾವರಣವಾಗಿದೆ. ಅಷ್ಟೇ ಅಲ್ಲ, ಕಾಲದ ಧೂಳಿನಡಿ ಮರೆಯಾಗಿಹೋದ ಅದೆಷ್ಟೋ ಇತಿಹಾಸದ ಸತ್ಯಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಮೌನ ಸಾಕ್ಷಿಗಳೂ ಆಗಿವೆ.

ಕೆಲವೊಮ್ಮೆ ಇಂತಹ ಪ್ರಾಚೀನ ದೇಗುಲಗಳ ಮುಂದೆ ನಿಂತಾಗ ಮನಸ್ಸಿಗೆ ವರ್ಣಿಸಲಾಗದ ನೆಮ್ಮದಿಯೊಂದು ಆವರಿಸುತ್ತದೆ. ಶತಮಾನಗಳ ಕಾಲವನ್ನು ದಾಟಿ ಬಂದಿರುವ ಆ ಶಿಲ್ಪಗಳನ್ನು ನೋಡುತ್ತಾ ಹೋದಂತೆ, ಮನಸ್ಸು ವರ್ತಮಾನದ ಗಡಿಯನ್ನು ದಾಟಿ ಯಾವುದೋ ಅಪರಿಚಿತ ಕಾಲಘಟ್ಟದಲ್ಲಿ ಸಂಚರಿಸತೊಡಗುತ್ತದೆ. ಆಧುನಿಕ ತಂತ್ರಜ್ಞಾನವಾಗಲಿ,

ಯಂತ್ರೋಪಕರಣಗಳಾಗಲಿ, ಇಂದಿನಷ್ಟು ಸೌಲಭ್ಯಗಳಾಗಲಿ ಇಲ್ಲದ ಕಾಲದಲ್ಲಿ ಚೋಳರು, ಚೇರರು, ಚಾಲುಕ್ಯರು ಹಾಗೂ ಹೊಯ್ಸಳರು ನಿರ್ಮಿಸಿದ ಬೃಹತ್ ದೇಗುಲಗಳನ್ನು ನೆನೆದಾಗ ಅಚ್ಚರಿಯ ಜೊತೆಗೆ ಅಪಾರ ಗೌರವವೂ ಮೂಡುತ್ತದೆ. ಅಂದು ಆ ಶಿಲೆಗಳಿಗೆ ಜೀವ ತುಂಬಿದ ಶಿಲ್ಪಿಗಳ ಕೈಚಳಕ, ಅವರ ಕಲ್ಪನಾಶಕ್ತಿ, ತಾಂತ್ರಿಕ ಜ್ಞಾನ, ತಾಳ್ಮೆ ಮತ್ತು ಕಲೆಯ ಬಗೆಗಿನ ಅನನ್ಯ ಶ್ರದ್ಧೆ ಎಂತಹದ್ದಿರಬಹುದು ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡುತ್ತದೆ.

ದೇಗುಲಗಳ ಪ್ರದಕ್ಷಿಣಾ ಪಥದಲ್ಲಿ ಸಾಗುವಾಗ ಗೋಡೆಗಳ ಮೇಲೆ ಒಂದರ ಹಿಂದೆ ಒಂದರಂತೆ ಮೂಡಿರುವ ವೈವಿಧ್ಯಮಯ ಕೆತ್ತನೆಗಳು ನಮ್ಮನ್ನು ಮತ್ತೊಂದು ಕಾಲಘಟ್ಟಕ್ಕೆ ಕರೆದೊಯ್ಯುತ್ತವೆ. ರಾಮಾಯಣ ಮತ್ತು ಮಹಾಭಾರತದ ಮಹಾಕಾವ್ಯಗಳ ಕಥನಗಳನ್ನು ಕಲ್ಲಿನ ಮೇಲೆ ಅದೆಷ್ಟು ಸೂಕ್ಷ್ಮವಾಗಿ, ಜೀವಂತವಾಗಿ ರೂಪಿಸಿದ್ದಾರೆಂದರೆ, ಅವುಗಳನ್ನು ನೋಡುವಾಗ ಕೇವಲ ಶಿಲ್ಪಗಳನ್ನು ನೋಡುತ್ತಿದ್ದೇವೆ ಎನ್ನಿಸುವುದಿಲ್ಲ; ಬದಲಾಗಿ ಆ ಮಹಾಕಾವ್ಯಗಳ ಘಟನೆಗಳನ್ನೇ ಕಣ್ಣಾರೆ ಕಾಣುತ್ತಿರುವ ಅನುಭವವಾಗುತ್ತದೆ. ಎಲ್ಲೋ ರಾಮನ



ವನವಾಸದ ಚಿತ್ರಣ, ಮತ್ತೊಂದೆಡೆ ಸೀತೆಯ ಅಗ್ನಿಪ್ರವೇಶ, ಇನ್ನೆಲ್ಲೋ ಕುರುಕ್ಷೇತ್ರದ ಯುದ್ಧದ ಭೀಕರತೆ, ಕೃಷ್ಣನ ಗೀತೋಪದೇಶದ ಸನ್ನಿವೇಶಗಳು... ಹೀಗೆ ಕಲ್ಲಿನ ಪ್ರತಿಯೊಂದು ಮಗ್ಗುಲೂ ಒಂದೊಂದು ಕಥೆಯನ್ನು ತನ್ನೊಳಗೆ ಹೊತ್ತು ನಿಂತಿರುತ್ತದೆ. ಅಕ್ಷರಗಳ ಮೂಲಕವಷ್ಟೇ ಅಲ್ಲದೆ, ಕಲೆಯ ಮೂಲಕವೂ ಜ್ಞಾನವನ್ನು ಮುಂದಿನ ಪೀಳಿಗೆಗೆ ತಲುಪಿಸಬಹುದು ಎಂಬುದನ್ನು ಅಂದಿನ ಶಿಲ್ಪಿಗಳು ತಮ್ಮ ಸೃಜನಶೀಲತೆಯ ಮೂಲಕ ತೋರಿಸಿಕೊಟ್ಟಿದ್ದಾರೆ.

ಈ ಶಿಲ್ಪಗಳ ಸೌಂದರ್ಯವನ್ನು ಇನ್ನಷ್ಟು ಆಳವಾಗಿ ಗಮನಿಸಿದಾಗ ಅವು ಕೇವಲ ಪೌರಾಣಿಕ ಕಥೆಗಳಿಗೆ ಸೀಮಿತವಾಗಿಲ್ಲ ಎಂಬುದು ಅರಿವಾಗುತ್ತದೆ. ಅಂದಿನ ಜನರ ಉಡುಗೆ-ತೊಡುಗೆ, ಆಭರಣಗಳು, ನೃತ್ಯ, ಸಂಗೀತ, ಯುದ್ಧಕಲೆ, ಪ್ರಾಣಿಗಳ ಚಿತ್ರಣ, ಸಾಮಾಜಿಕ ಜೀವನ, ಧಾರ್ಮಿಕ ಆಚರಣೆಗಳು ಹಾಗೂ ನಂಬಿಕೆಗಳ ಅನೇಕ ಮಜಲುಗಳು ಈ ಕೆತ್ತನೆಗಳಲ್ಲಿ ಪ್ರತಿಬಿಂಬಿತವಾಗಿವೆ. ಇಂದು ಲಿಖಿತ ದಾಖಲೆಗಳಲ್ಲಿ ದೊರೆಯದ ಕೆಲವು ಸಂಗತಿಗಳನ್ನು ಇಂತಹ ಶಿಲ್ಪಗಳು ಮತ್ತು ಪುರಾತತ್ತ್ವ ಅವಶೇಷಗಳು ಅರಿಯಲು ನೆರವಾಗುತ್ತವೆ. ಹೀಗಾಗಿ ಒಂದು ಶಿಲ್ಪವನ್ನು ನೋಡುವುದು ಕೇವಲ ಕಲೆಯನ್ನು ಆಸ್ವಾದಿಸುವುದಲ್ಲ; ಅದರ ಹಿಂದಿರುವ ಕಾಲಘಟ್ಟವನ್ನು, ಸಮಾಜವನ್ನು ಮತ್ತು ಬದುಕಿನ ಕ್ರಮವನ್ನು ಓದುವ ಪ್ರಯತ್ನವೂ ಹೌದು.

ಇನ್ನೂ ಮನಸ್ಸನ್ನು ಮುಟ್ಟುವ ಸಂಗತಿಯೆಂದರೆ, ಈ ಕಲಾಕೃತಿಗಳನ್ನು ರೂಪಿಸಿದ ಅದೆಷ್ಟೋ ಶಿಲ್ಪಿಗಳ ಹೆಸರುಗಳು ಇಂದು ನಮಗೆ ತಿಳಿದಿಲ್ಲ. ತಮ್ಮ ಬದುಕಿನ ಬಹುಪಾಲು ಸಮಯವನ್ನು ಕಲ್ಲಿಗೆ ಆಕಾರ ನೀಡುವುದರಲ್ಲಿ ಕಳೆದ ಆ ಕಲಾವಿದರು, ತಮ್ಮ ಅಸ್ತಿತ್ವದ ಗುರುತಿಗಿಂತಲೂ ತಮ್ಮ ಕಲೆಯ ಅಸ್ತಿತ್ವವನ್ನು ಶಾಶ್ವತಗೊಳಿಸಿ ಹೋಗಿದ್ದಾರೆ. ಅವರು ಈ ಲೋಕವನ್ನು ತೊರೆದು ಶತಮಾನಗಳೇ ಕಳೆದಿರಬಹುದು; ಆದರೆ ಅವರ ಬೆರಳಚ್ಚುಗಳು ಮಾತ್ರ ಇಂದಿಗೂ ಆ ಶಿಲೆಗಳ ಮೇಲೆ ಅಳಿಯದಂತೆ ಉಳಿದಿವೆ. ಬಹುಶಃ ಒಬ್ಬ ಕಲಾವಿದನಿಗೆ ಇದಕ್ಕಿಂತ ದೊಡ್ಡ ಅಮರತ್ವ ಮತ್ತೊಂದಿರಲಾರದು.


ಇತಿಹಾಸದ ಇಂತಹ ಮೌನ ಸಾಕ್ಷ್ಯಗಳ ನಡುವೆ ಮಣ್ಣಿನ ದಿಬ್ಬಗಳು, ಸಮಾಧಿ ಅವಶೇಷಗಳು, ಶಿಲಾವೃತ್ತಗಳು, ಶಾಸನಗಳು ಮತ್ತು ಪುರಾತನ ವಾಸಸ್ಥಳಗಳ ಕುರುಹುಗಳೂ ಅಷ್ಟೇ ಮಹತ್ವವನ್ನು ಪಡೆದುಕೊಳ್ಳುತ್ತವೆ. ಇಂದು ಸಾಮಾನ್ಯ ಮಣ್ಣಿನ ದಿಬ್ಬದಂತೆ ಕಾಣುವ ಒಂದು ನೆಲದ ಅಡಿಯಲ್ಲಿ, ಸಾವಿರಾರು ವರ್ಷಗಳ ಹಿಂದಿನ ಮಾನವನ ಬದುಕು ಹುದುಗಿರಬಹುದು. ಆತ ಬಳಸಿದ ಮಣ್ಣಿನ ಪಾತ್ರೆ, ರೂಪಿಸಿದ ಉಪಕರಣ, ಅನುಸರಿಸಿದ ಅಂತ್ಯಸಂಸ್ಕಾರದ ಪದ್ಧತಿ ಅಥವಾ ಉಳಿಸಿಕೊಂಡ ಸಾಂಸ್ಕೃತಿಕ ಆಚರಣೆಗಳು ಆ ಕಾಲದ ಬದುಕಿನ ಅಪರಿಚಿತ ಅಧ್ಯಾಯಗಳನ್ನು ತೆರೆದಿಡಬಹುದು. ಮಣ್ಣಿನ ಒಂದೊಂದು ಪದರವೂ ಒಂದೊಂದು ಕಾಲಘಟ್ಟದ ನೆನಪನ್ನು ತನ್ನೊಳಗೆ ಕಾಯ್ದಿಟ್ಟಿರುತ್ತದೆ. ಅವುಗಳನ್ನು ಹೊರತೆಗೆದು, ಅಧ್ಯಯನ ಮಾಡಿ, ಕಾಲನಿರ್ಣಯಗೊಳಿಸಿ, ಅರ್ಥೈಸುವ ಪುರಾತತ್ತ್ವಶಾಸ್ತ್ರದ ಪ್ರಯತ್ನವೇ ಇತಿಹಾಸದ ಅನೇಕ ಮೌನಗಳಿಗೆ ಧ್ವನಿಯಾಗುತ್ತದೆ.

ಆದರೆ ಇಂತಹ ಅಮೂಲ್ಯ ಪರಂಪರೆಯನ್ನು ನಾವು ಎಷ್ಟರಮಟ್ಟಿಗೆ ಅರಿತುಕೊಂಡಿದ್ದೇವೆ? ನಮ್ಮ ಸುತ್ತಲಿನ ಎಷ್ಟೋ ಪುರಾತನ ಸ್ಮಾರಕಗಳು ಕಾಲದ ಹೊಡೆತಕ್ಕೆ ಸಿಲುಕಿ, ನಿರ್ಲಕ್ಷ್ಯಕ್ಕೆ ಒಳಗಾಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಹಂತದಲ್ಲಿವೆ. ಒಂದು ಶಿಲ್ಪ ಒಡೆದುಹೋದಾಗ ಕೇವಲ ಕಲ್ಲಿನ ತುಂಡೊಂದು ನಾಶವಾಗುವುದಿಲ್ಲ; ಅದರೊಂದಿಗೆ ಒಂದು ಕಾಲಘಟ್ಟದ ಕಲಾತ್ಮಕ ಜಿಜ್ಞಾಸೆಯ ಅಭಿವ್ಯಕ್ತಿಯೂ, ಸಾಂಸ್ಕೃತಿಕ ನೆನಪಿನ ಒಂದು ಭಾಗವೂ ಕಳೆದುಹೋಗುತ್ತದೆ.

ಹೀಗಾಗಿ ಇತಿಹಾಸವನ್ನು ತಿಳಿದುಕೊಳ್ಳುವುದಷ್ಟೇ ಅಲ್ಲ, ಅದರ ಸಾಕ್ಷ್ಯಗಳನ್ನು ಗುರುತಿಸುವುದು, ಸಂರಕ್ಷಿಸುವುದು ಮತ್ತು ಮುಂದಿನ ಪೀಳಿಗೆಗೆ ಪರಿಚಯಿಸುವುದೂ ನಮ್ಮ ಹೊಣೆಗಾರಿಕೆಯಾಗಿದೆ.

ಕೊನೆಗೆ, ಒಂದು ಪ್ರಾಚೀನ ದೇಗುಲದ ಮುಂದೆ ನಿಂತಾಗ ಮನಸ್ಸಿನಲ್ಲಿ ಮೂಡುವ ಆ ಅಚ್ಚರಿ, ಆ ನೆಮ್ಮದಿ, ಆ ಮೌನದ ಅನುಭವವನ್ನು ಪದಗಳಲ್ಲಿ ಸಂಪೂರ್ಣವಾಗಿ ಹಿಡಿದಿಡುವುದು ಬಹುಶಃ ಅಸಾಧ್ಯ. ಏಕೆಂದರೆ ಆ ಶಿಲೆಗಳು ಕೇವಲ ಕಲ್ಲುಗಳಲ್ಲ; ಅವು ಕಾಲದ ಸಾಕ್ಷಿಗಳು, ಕಲಾವಿದರ ಕನಸುಗಳು, ಸಾಮ್ರಾಜ್ಯಗಳ ನೆನಪುಗಳು ಮತ್ತು ಮನುಷ್ಯನ ಸೃಜನಶೀಲತೆಯ ಅಳಿಯದ ಗುರುತುಗಳು.

ಕಾಲ ಎಲ್ಲವನ್ನೂ ತನ್ನೊಳಗೆ ಸೇರಿಸಿಕೊಂಡರೂ, ಕೆಲವು ನೆನಪುಗಳನ್ನು ಅಳಿಸಲಾಗುವುದಿಲ್ಲ. ಅವು ಶಿಲೆಗಳಾಗಿ ಉಳಿಯುತ್ತವೆ, ಕೆತ್ತನೆಗಳಾಗಿ ಉಸಿರಾಡುತ್ತವೆ, ಮಣ್ಣಿನ ಪದರಗಳಲ್ಲಿ ಮೌನವಾಗಿ ಕಾಯುತ್ತವೆ. ಅವುಗಳ ಬಳಿ ಸ್ವಲ್ಪ ಹೊತ್ತು ನಿಂತು ಆಲಿಸುವ ಮನಸ್ಸು ನಮ್ಮದಾಗಿದ್ದರೆ, ಇತಿಹಾಸವೆಂಬುದು ಗತಕಾಲದ ಕಥೆಯಷ್ಟೇ ಅಲ್ಲ, ಇಂದಿಗೂ ನಮ್ಮೊಂದಿಗೆ ಸಂವಾದ ನಡೆಸುತ್ತಿರುವ ಜೀವಂತ ಅನುಭವ ಎಂಬುದು ಅರಿವಾಗುತ್ತದೆ. ಏಕೆಂದರೆ ಇತಿಹಾಸಕ್ಕೆ ಮೌನವಿರಬಹುದು, ಆದರೆ ಆ ಮೌನಕ್ಕೂ ಹೇಳಲು ಸಾವಿರಾರು ಕಥೆಗಳಿವೆ.



ಪಡಿತರ ಚೀಟಿದಾರರಿಗೆ ಸಿಹಿಸುದ್ದಿ: ಇ-ಕೆವೈಸಿ ಗಡುವು ನ.30ರವರೆಗೆ ವಿಸ್ತರಣೆ

ಪಾಂಡವ ನ್ಯೂಸ್, ಬೆಂಗಳೂರು : ರಾಜ್ಯದ ಪಡಿತರ ಚೀಟಿದಾರರಿಗೆ ರಾಜ್ಯ ಸರ್ಕಾರ ಸಿಹಿಸುದ್ದಿ ನೀಡಿದ್ದು, ಪಡಿತರ ಚೀಟಿಯ ಇ-ಕೆವೈಸಿ (ಜ-ಏಜಿಅ) ಮಾಡಿಸಲು ನೀಡಲಾಗಿದ್ದ ಗಡುವನ್ನು ನವೆಂಬರ್ 30ರವರೆಗೆ ವಿಸ್ತರಿಸಿದೆ.

ಈ ಹಿಂದೆ ನವೆಂಬರ್ 10 ಕೊನೆಯ ದಿನವಾಗಿತ್ತು. ಫಲಾನುಭವಿಗಳ ಅನುಕೂಲಕ್ಕಾಗಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಇ-ಕೆವೈಸಿ ಮಾಡಿಸಲು ಎರಡು ಆಯ್ಕೆಗಳನ್ನು ನೀಡಲಾಗಿದ್ದು, ಮನೆಯಲ್ಲೇ ಕುಳಿತು ಅನ್ನಸೇವೆ ಮೂಲಕ ಮೊಬೈಲ್‌ನಲ್ಲೇ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಇಲ್ಲವೇ ಸಮೀಪದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಮಾಡಿಸಿಕೊಳ್ಳಬಹುದು.

ನ್ಯಾಯಬೆಲೆ ಅಂಗಡಿಗಳ ಮುಂದೆ ಫಲಾನುಭವಿಗಳು ಸರದಿಯಲ್ಲಿ ನಿಲ್ಲುವುದನ್ನು ತಪ್ಪಿಸಲು ರಾಜ್ಯದ 31 ಜಿಲ್ಲೆಗಳಿಗೂ ಅನ್ನಸೇವೆ ಸೌಲಭ್ಯ ವಿಸ್ತರಿಸಲಾಗಿದೆ. ಹಿರಿಯ ನಾಗರಿಕರು ಹಾಗೂ ಮಕ್ಕಳ ಅನುಕೂಲಕ್ಕಾಗಿ ಮುಖ ಗುರುತಿಸುವಿಕೆ ಮೂಲಕ ದೃಢೀಕರಣ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಕೇಂದ್ರ ಸರ್ಕಾರದ ನಿಯಮದಂತೆ ಪ್ರತಿ ಐದು ವರ್ಷಕ್ಕೊಮ್ಮೆ ಇ-ಕೆವೈಸಿ ಮಾಡಿಸುವುದು ಕಡ್ಡಾಯವಾಗಿದ್ದು, ನಿಗದಿತ ಗಡುವಿನೊಳಗೆ ಎಲ್ಲ ಪಡಿತರ ಚೀಟಿದಾರರು ಪ್ರಕ್ರಿಯೆ ಪೂರ್ಣಗೊಳಿಸುವಂತೆ ಆಹಾರ ಇಲಾಖೆ ಮನವಿ ಮಾಡಿದೆ.

2035ರ ವೇಳೆಗೆ 1 ಬಿಲಿಯನ್ ಮನೆಗಳಿಗೆ ಶುದ್ಧ ವಿದ್ಯುತ್

ಪಾಂಡವ ನ್ಯೂಸ್, ಬೆಂಗಳೂರು : ವಿಶ್ವಸಂಸ್ಥೆಯ ಹವಾಮಾನ ಮಾತುಕತೆ ನಡೆಯುತ್ತಿರುವಂತೆಯೇ, ಭಾರತವು 2035 ರ ವೇಳೆಗೆ 1 ಬಿಲಿಯನ್‌ಗಿಂತಲೂ ಹೆಚ್ಚು ಮನೆಗಳಿಗೆ ಶುದ್ಧ ವಿದ್ಯುತ್ ಪೂರೈಸಲು ಸಾಕಷ್ಟು ಶುದ್ಧ ವಿದ್ಯುತ್ ಸ್ಥಾಪಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ಹೊಂದಿದೆ ಮತ್ತು ಕೆಲವು ಸೌರ ಮತ್ತು ಪವನ ಶಕ್ತಿಯು ಗ್ರಾಹಕರನ್ನು ತಲುಪುವುದನ್ನು ತಡೆಯುವ ಅಡಚಣೆಗಳನ್ನು ಕಡಿಮೆ ಮಾಡಲು ಸುಮಾರು 20 ಬಿಲಿಯನ್ ಮೌಲ್ಯದ ವಿದ್ಯುತ್ ಗ್ರಿಡ್ ನವೀಕರಣಗಳನ್ನು ಅನುಮೋದಿಸಿದೆ.

ವಿಶ್ವದ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ಮತ್ತು ಅತಿದೊಡ್ಡ ಇಂಗಾಲ ಮಾಲಿನ್ಯಕಾರಕಗಳಲ್ಲಿ ಒಂದಾದ ಭಾರತವು ಶುದ್ಧ ವಿದ್ಯುತ್ ಅನ್ನು ವೇಗವಾಗಿ ವಿಸ್ತರಿಸುವ ದೇಶಗಳಲ್ಲಿ ಒಂದಾಗಿದೆ. ಪಳೆಯುಳಿಕೆ ಇಂಧನಗಳಿಂದ ದೂರ ಸರಿಯುವುದನ್ನು ವೇಗಗೊಳಿಸುವುದು ಟರ್ಕಿಯಲ್ಲಿ ಕಾಪ್ 31 ಎಂದು ಕರೆಯಲ್ಪಡುವ ಈ ವರ್ಷದ ಹವಾಮಾನ ಮಾತುಕತೆಯ ಪ್ರಮುಖ ಗುರಿಯಾಗಿದೆ.ಭಾರತವು ಸೆಪ್ಟೆಂಬರ್ ಅಂತ್ಯದಲ್ಲಿ 900-ಗಿಗಾವ್ಯಾಟ್ ಗುರಿಯನ್ನು ಘೋಷಿಸಿತು. ಇದು ಸೌರ, ಪವನ, ಜಲವಿದ್ಯುತ್ ಮತ್ತು ಪರಮಾಣು ಶಕ್ತಿ ಸೇರಿದಂತೆ ಪಳೆಯುಳಿಕೆಯೇತರ ವಿದ್ಯುತ್ ಮೂಲಗಳನ್ನು ಒಳಗೊಂಡಿದೆ. ಇದು 2030 ರ ವೇಳೆಗೆ ಭಾರತದ 500 ಗಿಗಾವ್ಯಾಟ್‌ಗಳ ಶುದ್ಧ ವಿದ್ಯುತ್‌ನ ಅಸ್ತಿತ್ವದಲ್ಲಿರುವ ಗುರಿಗಿಂತ ಸುಮಾರು ಎರಡು ಪಟ್ಟು ಹೆಚ್ಚಾಗಿದೆ. ಭಾರತದ ಪ್ರಸ್ತುತ ಶುದ್ಧ ವಿದ್ಯುತ್ ಸಾಮರ್ಥ್ಯವು ಕೇವಲ 300 ಗಿಗಾವ್ಯಾಟ್‌ಗಳಿಗಿಂತ ಸ್ವಲ್ಪ ಹೆಚ್ಚು, ಇದು ಚೀನಾ ಮತ್ತು ಯುನೈಟೆಡ್ ಸ್ಟೇಟ್ಸ್‌ಗಿಂತ ಮೂರನೇ ಸ್ಥಾನದಲ್ಲಿದೆ.ತಜ್ಞರು ಹೇಳುವಂತೆ ಗುರಿಯನ್ನು ತಲುಪುವುದರಿಂದ ವಿದ್ಯುತ್ ವೆಚ್ಚ ಕಡಿಮೆಯಾಗುತ್ತದೆ, ಕಲ್ಲಿದ್ದಲು ನಿರ್ಮಾಣವನ್ನು ತಡೆಯಬಹುದು ಮತ್ತು ಶುದ್ಧ ಇಂಧನಕ್ಕೆ ಪರಿವರ್ತನೆ ವೇಗಗೊಳ್ಳುತ್ತದೆ.ಭಾರತವು ಅಸಮರ್ಪಕ ಪ್ರಸರಣ ಮೂಲಸೌಕರ್ಯದಿಂದಾಗಿ ಉತ್ಪಾದಿಸಬಹುದಾದ ಎಲ್ಲಾ ನವೀಕರಿಸಬಹುದಾದ ವಿದ್ಯುತ್ ಅನ್ನು ಬಳಸಲು ಹೆಣಗಾಡುತ್ತಿರುವಾಗ ಈ ಒತ್ತಡವು ಬಂದಿದೆ. ಹೊಸ ಗು-ರಿಯು ವಾಸ್ತವವಾಗಿ ಉತ್ಪಾದಿಸುವ ವಿದ್ಯುತ್ ಪ್ರಮಾಣಕ್ಕಿಂತ ಹೆಚ್ಚಾಗಿ ಸ್ಥಾಪಿಸಲಾದ ಉತ್ಪಾದನಾ ಸಾಮರ್ಥ್ಯವನ್ನು ಸೂಚಿಸುತ್ತದೆ.

ಗ್ರಿಡ್ ತಲುಪದಿದ್ದರೆ, ಭಾರತವು ಈ ಗುರಿಯನ್ನು ತಲುಪಲು ಯಾವುದೇ ಮಾರ್ಗವಿಲ್ಲ ಎಂದು ಬರ್ಕ್‌ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಭಾರತ ಇಂಧನ ಮತ್ತು ಹವಾಮಾನ ಕೇಂದ್ರದ ನಿಕಿತ್ ಅಭ್ಯಂಕರ್ ಹೇಳಿದರು. ಸದೃಢ ಮತ್ತು ನವೀನ ಪ್ರಸರಣ ಗ್ರಿಡ್ ಅತ್ಯಗತ್ಯ.ಸರ್ಕಾರವು ತನ್ನ ಹಸಿರು ಇಂಧನ ಕಾರಿಡಾರ್ ಯೋಜನೆಯಡಿಯಲ್ಲಿ ಪ್ರಸರಣ ಮೂಲಸೌಕರ್ಯ ಮತ್ತು ಬ್ಯಾಟರಿ ಸಂಗ್ರಹಣೆಗಾಗಿ ಸುಮಾರು 20 ಬಿಲಿಯನ್ ಹಣವನ್ನು ಅನುಮೋದಿಸಿದೆ.

ಮುಂಬೈ ಮೂಲದ ವೇದಿಕೆಯ ಅರ್ಥಶಾಸ್ತ್ರಜ್ಞ ಅಜಯ್ ಶಾ ಈ ಪರಿವರ್ತನೆಯನ್ನು ಭಾರತೀಯ ಎಲೆಕ್ಟ್ರೋಟ್ ನ ಹೊರಹೊಮ್ಮುವಿಕೆ ಎಂದು ಬಣ್ಣಿಸಿದ್ದಾರೆ, ಇದರಲ್ಲಿ ವಿದ್ಯುತ್ ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಹೆಚ್ಚಾಗಿ ಬದಲಾಯಿಸುತ್ತದೆ.ಹಾಗಾಗಿ ಈಗ ಭಾರತದಲ್ಲಿ ನಿಮ್ಮ ಬಳಿ ಎರಡು ಸಂಪನ್ಮೂಲಗಳಿವೆ – ಅಗ್ಗದ ಕಾರ್ಮಿಕ ಶಕ್ತಿ ಮಾತ್ರವಲ್ಲದೆ, ಅಗ್ಗದ ಇಂಧನವೂ ನಿಮ್ಮ ಬಳಿಯಿದೆ, ಎಂದು ಶಾ ಹೇಳಿದರು.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಬೀದಿ ನಾಟಕ ಮತ್ತು ಆಟೋ ಪ್ರಚಾರಕ್ಕೆ ನ್ಯಾ.ರಾಜೇಶ್ ಚಾಲನೆ



ಪಾಂಡವ ನ್ಯೂಸ್, ಬಳ್ಳಾರಿ : ಜಿಲ್ಲೆಯಲ್ಲಿ ಬಾಲ ಹಾಗೂ ಕಿಶೋರಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಕುರಿತು ಜನಜಾಗೃತಿ ಮೂಡಿಸಲು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿಯಲ್ಲಿ ಬೀದಿ ನಾಟಕ ಮತ್ತುಆಟೋ ಪ್ರಚಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಗುರುವಾರ, ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ರಾಜೇಶ್‌ಎನ್. ಹೊಸಮನೆ ಅವರು, ಆಟೋ ಪ್ರಚಾರಕ್ಕೆ ಚಾಲನೆ ನೀಡಿ ಹಾಗೂ ಬೀದಿ ನಾಟಕಕಲಾವಿದರ ತಂಡಕ್ಕೆ ತಮಟೆ ಬಾರಿಸುವ ಮೂಲಕ ಚಾಲನೆ ನೀಡಿದರು.

ಈ ಜಾಗೃತಿ ಜಾಥಾವು ಜಿಲ್ಲೆಯ ಎಲ್ಲಾ ತಾಲೂಕುಗಳ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ಕಾಲೋನಿಗಳಲ್ಲಿ ಸತತ 11 ದಿನಗಳವರೆಗೆ ಕರಪತ್ರ ಹಾಗೂ ಭಿತ್ತಿಪತ್ರಗಳನ್ನು ಹಂಚುವುದರ ಮೂಲಕ ಜನರಲ್ಲಿಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ.

ಈ ವೇಳೆ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ತ್ರಿವೇಣಿ ಪತ್ತಾರ್, ಕಾರ್ಮಿಕ ಅಧಿಕಾರಿ ಸಿದ್ದಪ್ಪ ಖೈನೂರು, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಸಿಂಧೆ ನಂದಿನಿ, ಕಾರ್ಮಿಕ ನಿರೀಕ್ಷಕರಾದ ಪರಶುರಾಮ್ ಮತ್ತು

ಅಂಟಿಗೆ–ಪಂಟಿಗೆ: ಗ್ರಾಮೀಣ ಬದುಕಿನ ವಿಶಿಷ್ಟ ದೀಪಾವಳಿ ಸಂಪ್ರದಾಯ

ದೀಪದ ಬೆಳಕಿನೊಂದಿಗೆ ಮನೆಮನೆಗೆ ತೆರಳಿ ಹಾಡು ಹಾಡಿ ಕಾಣಿಕೆ ಸಂಗ್ರಹಿಸುವ ಮಕ್ಕಳ ಸಂಭ್ರಮ

ವಿನಾಯಕ ಭೀಮಪ್ಪನವರ

ಪಾಂಡವ ನ್ಯೂಸ್ ರಟ್ಟೀಹಳ್ಳಿ: ದೀಪಾವಳಿ ಹಬ್ಬವೆಂದರೆ ಬೆಳಕಿನ ಹಬ್ಬ. ಕತ್ತಲೆಯನ್ನು ದೂರ ಮಾಡಿ ಬೆಳಕಿನ ಮೂಲಕ ಬದುಕಿನಲ್ಲಿ ಹೊಸ ಭರವಸೆ ಮೂಡಿಸುವ ಹಬ್ಬ. ಈ ಹಬ್ಬದ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಜೀವಂತವಾಗಿರುವ ವಿಶಿಷ್ಟ ಸಂಪ್ರದಾಯವೇ 'ಅಂಟಿಗೆ–ಪಂಟಿಗೆ'. ದೀಪಾವಳಿ ಮುಗಿದ ಮರುದಿನದಿಂದ ಆರಂಭವಾಗುವ ಈ ಸಂಪ್ರದಾಯ ಮಲೆನಾಡು ಪ್ರದೇಶ ಹಾಗೂ ಮಧ್ಯ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ವಿಶೇಷವಾಗಿ ಆಚರಣೆಯಲ್ಲಿದೆ.

ದೀಪಾವಳಿಯ ಬಲಿಪಾಡ್ಯಮಿ ದಿನದ ನಂತರ ಆರಂಭವಾಗುವ ಅಂಟಿಗೆ–ಪಂಟಿಗೆ ಸಂಪ್ರದಾಯವನ್ನು ಕೆಲವರು ಮೂರು ದಿನಗಳ ಕಾಲ ಆಚರಿಸಿದರೆ, ಇನ್ನೂ ಕೆಲವರು ಐದು ದಿನಗಳವರೆಗೆ ಮುಂದುವರಿಸುತ್ತಾರೆ. ಗ್ರಾಮದ ಪುಟ್ಟ ಮಕ್ಕಳು ಕೈಯಲ್ಲಿ ದೀಪ ಹಿಡಿದುಕೊಂಡು ಮನೆಮನೆಗೆ ತೆರಳಿ ಅಂಟಿಗೆ–ಪಂಟಿಗೆ ಹಾಡುಗಳನ್ನು ಹಾಡುತ್ತಾ ಕಾಣಿಕೆ ಪಡೆಯುವುದು ಈ ಸಂಪ್ರದಾಯದ ವಿಶೇಷತೆ. ಪ್ರಾದೇಶಿಕ ಭಾಷೆ, ಜನಪದ ಸಂಸ್ಕೃತಿ ಹಾಗೂ ಆಚರಣೆಯ ವೈವಿಧ್ಯಕ್ಕೆ ಅನುಗುಣವಾಗಿ ಈ ಸಂಪ್ರದಾಯಕ್ಕೆ ಬೇರೆ ಬೇರೆ ಹೆಸರುಗಳೂ ಇವೆ. ಅವಂಟಿಗೆ–ಪಾವಂಟಿಗೆ, ಅಡಿಪಿಡಿ, ಅಂಟಿ–ಸುಂಟಿ, ಅಣಿ–ಪೀಣಿ, ಅಂಟ್ರೀಕಿ–ಪಂಟ್ರೀಕಿ ಮುಂತಾದ ಹೆಸರುಗಳಿಂದಲೂ ಇದನ್ನು ಕರೆಯಲಾಗುತ್ತದೆ.

ದೀಪದ ಬೆಳಕಿನಲ್ಲಿ ಮನೆಮನೆಗೆ ಸಂಚಾರ : ದೀಪಾವಳಿಯ ಬಲಿಪಾಡ್ಯಮಿ ದಿನದಿಂದ ಗ್ರಾಮೀಣ ಭಾಗದ ಮಕ್ಕಳು ಸಂಜೆಯಾಗುತ್ತಿದ್ದಂತೆ ತಮ್ಮ ಮನೆಗಳಿಂದ ದೀಪಗಳನ್ನು ಹಿಡಿದುಕೊಂಡು ಗುಂಪು ಗುಂಪಾಗಿ ಹೊರಡುತ್ತಾರೆ. ಮನೆಮನೆಗೆ ತೆರಳಿ ದೀಪದ ಬೆಳಕಿನೊಂದಿಗೆ ಜನಪದ ಹಾಡುಗಳನ್ನು ಹಾಡುತ್ತಾ ಮನೆಯವರಿಂದ ಧಾನ್ಯ ಅಥವಾ ಹಣದ ರೂಪದಲ್ಲಿ ಕಾಣಿಕೆ ಪಡೆಯುತ್ತಾರೆ. ಈ ಸಂದರ್ಭದಲ್ಲಿ ಮಕ್ಕಳ ಹಾಡು, ಮಾತು, ಸಂಭ್ರಮ ಹಾಗೂ ದೀಪದ ಬೆಳಕು ಗ್ರಾಮೀಣ ವಾತಾವರಣಕ್ಕೆ ವಿಶೇಷ ಕಳೆ ನೀಡುತ್ತದೆ.

'ಮಣ್ಣಲಿ ಹುಟ್ಟಿದೆ, ಮಣ್ಣಲಿ ಬೆಳೆದಿದೆ, ಎಣ್ಣೆಲಿ ಕಣ್ಣು ಬಿಟ್ಟು, ಜಗಜ್ಯೋತಿ ನಾ, ಸತ್ಯದಿಂದ ಉರಿವೆ ಜಗಜ್ಯೋತಿ' ಎಂಬ ಸಾಲುಗಳ ಮೂಲಕ ದೀಪದ ಮಹತ್ವವನ್ನು ಸಾರುತ್ತಾರೆ.



ಮಣ್ಣಿನಿಂದ ತಯಾರಾದ ಹಣತೆ, ಅದರಲ್ಲಿ ತುಂಬಿದ ಎಣ್ಣೆ, ಬೆಳಕು ನೀಡುವ ಬತ್ತಿ ಇವೆಲ್ಲವೂ ಬದುಕಿನ ಸಾರ್ಥಕತೆಯ ಸಂಕೇತಗಳೆಂಬ ಭಾವನೆ ಈ ಹಾಡುಗಳಲ್ಲಿ ವ್ಯಕ್ತವಾಗುತ್ತದೆ.

ಪ್ರತಿಯೊಂದು ಪ್ರದೇಶದಲ್ಲಿಯೂ ಹಾಡುವ ಹಾಡುಗಳ ಶೈಲಿ ವಿಭಿನ್ನವಾಗಿರುತ್ತದೆ. ನಮ್ಮ ಭಾಗದಲ್ಲಿ 'ಅಂಟ್ರೀಕಿ ಪಂಟ್ರೀಕಿ ಎಂಟು ಗಾಳಿ ಬೀಸೋ, ಎಣ್ಣಿ ಬಿಡೋ ದ್ಯಾಮವ್ವ, ಎಣ್ಣಿ ಬಿಡೋ ದ್ಯಾಮವ್ವ' ಎಂಬ ಹಾಡಿನೊಂದಿಗೆ ಮಕ್ಕಳು ತಮ್ಮ ಸಂಚಾರ ಆರಂಭಿಸುತ್ತಾರೆ. ಹಾಡುಗಳಲ್ಲಿ ದೇವರ ಸ್ಮರಣೆ, ಗ್ರಾಮೀಣ ಬದುಕಿನ ಚಿತ್ರಣ, ಹಾಸ್ಯ, ಪೌರಾಣಿಕ ಕಥೆಗಳು ಹಾಗೂ ಕುಟುಂಬ ಸಂಬಂಧಗಳ ಸೊಗಡು ಬೆರೆತಿರುತ್ತದೆ.

ಜನಪದ ಕಲೆಗಳ ಸಂಗಮ : ಅಂಟಿಗೆ–ಪಂಟಿಗೆ ಕೇವಲ ಮನೆಮನೆಗೆ ತೆರಳಿ ಕಾಣಿಕೆ ಸಂಗ್ರಹಿಸುವ ಆಚರಣೆಯಲ್ಲ. ಇದು ಗ್ರಾಮೀಣ ಜನಪದ ಕಲೆಯ ಜೀವಂತ ರೂಪವೂ ಹೌದು. ಈ ಸಂದರ್ಭದಲ್ಲಿ ಶಿವನ ಹಾಗೂ ಶಿವಭಕ್ತರ ಅಪರೂಪದ ಪೌರಾಣಿಕ ಮತ್ತು ಕೌಟುಂಬಿಕ ಕಥೆಗಳನ್ನು ಹಾಡಿನ ಮೂಲಕ ನಿರೂಪಿಸಲಾಗುತ್ತದೆ. ಕೆಲವು ಹಾಡುಗಳಲ್ಲಿ ಲಾವಣಿಯ ಲಯವಿದ್ದರೆ, ಇನ್ನು ಕೆಲವು ಹಾಡುಗಳಲ್ಲಿ ಕೋಲಾಟ ಹಾಗೂ ಇತರ ಜನಪದ ಕಲೆಗಳ ಪ್ರಭಾವ ಕಾಣಬಹುದು.

ಮಕ್ಕಳು ಗುಂಪಾಗಿ ಹಾಡುವಾಗ ಒಬ್ಬರು ಹಾಡಿನ ಸಾಲು ಹೇಳಿದರೆ ಉಳಿದವರು ಅದನ್ನು ಪುನರಾವರ್ತಿಸುವ ಪದ್ಧತಿಯೂ ಇದೆ. ಇದರಿಂದ ಮಕ್ಕಳಲ್ಲಿ ಹಾಡುವ ಕಲೆ, ನೆನಪಿನ ಶಕ್ತಿ, ಒಗ್ಗಟ್ಟು ಹಾಗೂ ಪರಸ್ಪರ ಸಹಕಾರದ ಗುಣಗಳು ಬೆಳೆದುಬರುತ್ತವೆ. ಹಿರಿಯರಿಂದ ಕಲಿತ ಹಾಡುಗಳನ್ನು ಮಕ್ಕಳು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಮೂಲಕ ಮೌಖಿಕ ಜನಪದ ಪರಂಪರೆಯೂ ಉಳಿಯುತ್ತದೆ.

ಸಾಮೂಹಿಕ ಊಟ, ಕಾಣಿಕೆ ವಿತರಣೆ : ಮೂರು ಅಥವಾ ಐದು ದಿನಗಳ ಕಾಲ ನಡೆಯುವ ಈ ಸಂಪ್ರದಾಯದ ಕೊನೆಯ ದಿನ ಮಕ್ಕಳು ಸಂಗ್ರಹಿಸಿದ ಕಾಣಿಕೆಗಳ ಲೆಕ್ಕ ಹಾಕುತ್ತಾರೆ. ಮನೆಮನೆಗಳಿಂದ ಸಂಗ್ರಹಿಸಿದ ಧಾನ್ಯ ಹಾಗೂ ಹಣವನ್ನು ಸಾಮೂಹಿಕವಾಗಿ ಬಳಸಿಕೊಂಡು ಊಟದ ಕೂಟವನ್ನು ಆಯೋಜಿಸುತ್ತಾರೆ. ಕೆಲವೆಡೆ ಎಲ್ಲರೂ ಸೇರಿ ಸಾಮೂಹಿಕವಾಗಿ ಅಡುಗೆ ಮಾಡಿ ಊಟ ಮಾಡುವ ಪದ್ಧತಿಯೂ ಇದೆ.

ದೀಪವನ್ನು ಕಳುಹಿಸಲು ಗ್ರಾಮದ ಒಂದು ನಿರ್ದಿಷ್ಟ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಹಲಸಿನ ಮರದ ಕೊಂಬೆಯ ಮೇಲೆ ದೀಪದ ಬತ್ತಿಯನ್ನು ಇಟ್ಟು, ಕೈಮುಗಿದು 'ಅಂಟಿಗೆ–ಪಂಟಿಗೆ ಓಟ್ಲ' ಎಂದು ಕೂಗುವ ಮೂಲಕ ಸಂಪ್ರದಾಯಕ್ಕೆ ತೆರೆ ಎಳೆಯುತ್ತಾರೆ. ಈ ಸಂದರ್ಭದಲ್ಲಿ ಮಕ್ಕಳು ಸಂಗ್ರಹಿಸಿದ ಧಾನ್ಯ ಹಾಗೂ ಹಣವನ್ನು ಬಳಸಿ ಸಾಮೂಹಿಕ ಊಟದ ವ್ಯವಸ್ಥೆ ಮಾಡುತ್ತಾರೆ. ಕೆಲವು ಕಡೆಗಳಲ್ಲಿ ದೀಪವನ್ನು ಕಳುಹಿಸುವ ಸ್ಥಳ ಹಾಗೂ ಆಚರಣೆಯ ವಿಧಾನಗಳಲ್ಲಿ ಸ್ಥಳೀಯ ಸಂಪ್ರದಾಯಕ್ಕೆ ಅನುಗುಣವಾಗಿ ವ್ಯತ್ಯಾಸಗಳಿರುತ್ತವೆ.

ಸಂಸ್ಕೃತಿಯ ಪ್ರತಿಬಿಂಬ : ಅಂಟಿಗೆ–ಪಂಟಿಗೆ ಸಂಪ್ರದಾಯದಲ್ಲಿ ದೀಪಕ್ಕೆ ವಿಶೇಷ ಸ್ಥಾನವಿದೆ. ದೀಪವನ್ನು ಹಿಡಿದು ಮನೆಮನೆಗೆ ತೆರಳುವ ಕ್ರಿಯೆಯ ಹಿಂದೆ ಸಮೃದ್ಧಿ, ಒಳಿತನ್ನು ಹೊತ್ತು ತರುವ ಆಶಯ ಅಡಗಿದೆ. ದೀಪದ ಬೆಳಕಿನ ಮೂಲಕ ಅಜ್ಞಾನವೆಂಬ ಕತ್ತಲೆ ದೂರವಾಗಿ ಜ್ಞಾನ, ನೆಮ್ಮದಿ ಹಾಗೂ ಸಂತೋಷದ ಬೆಳಕು ಪ್ರತಿಯೊಬ್ಬರ ಬದುಕಿನಲ್ಲಿ ಮೂಡಲಿ ಎಂಬ ಸಂದೇಶವನ್ನು ಈ ಆಚರಣೆ ಸಾರುತ್ತದೆ. ಮಲೆನಾಡಿನ ಸಾಂಸ್ಕೃತಿಕ ಕನ್ನಡಿಯಂತಿರುವ ಈ ಸಂಪ್ರದಾಯ ಗ್ರಾಮೀಣ ಜನಜೀವನದ ನಂಬಿಕೆ, ಆಚರಣೆ ಹಾಗೂ ಜನಪದ ಸಾಹಿತ್ಯದ ಅಪೂರ್ವ ಸಂಗಮವಾಗಿದೆ. ಆಧುನಿಕತೆಯ ಪ್ರಭಾವದಿಂದ ಅನೇಕ ಗ್ರಾಮೀಣ ಆಚರಣೆಗಳು ಮರೆಯಾಗುತ್ತಿರುವ ಇಂದಿನ ದಿನಗಳಲ್ಲಿ ಅಂಟಿಗೆ–ಪಂಟಿಗೆಯಂತಹ ಸಂಪ್ರದಾಯಗಳನ್ನು ಉಳಿಸಿ ಬೆಳೆಸುವ ಅಗತ್ಯವಿದೆ. ಮಕ್ಕಳಿಗೆ ಇವುಗಳ ಮಹತ್ವ ತಿಳಿಸುವ ಮೂಲಕ ಮುಂದಿನ ಪೀಳಿಗೆಗೂ ಈ ಜನಪದ ಪರಂಪರೆಯನ್ನು ಪರಿಚಯಿಸಬೇಕಿದೆ.

ಒಟ್ಟಿನಲ್ಲಿ, ಅಂಟಿಗೆ–ಪಂಟಿಗೆ ದೀಪಾವಳಿಯ ಸಂಭ್ರಮವನ್ನು ಕೆಲವು ದಿನಗಳ ಕಾಲ ಮುಂದುವರಿಸುವುದಷ್ಟೇ ಅಲ್ಲದೆ, ಮಕ್ಕಳಲ್ಲಿ ಒಗ್ಗಟ್ಟು, ಸಹಬಾಳ್ವೆ, ಹಂಚಿಕೊಂಡು ತಿನ್ನುವ ಗುಣ ಹಾಗೂ ಗ್ರಾಮೀಣ ಸಂಸ್ಕೃತಿಯ ಬಗ್ಗೆ ಅಭಿಮಾನ ಬೆಳೆಸುವ ವಿಶಿಷ್ಟ ಆಚರಣೆಯಾಗಿದೆ. ದೀಪದ ಬೆಳಕಿನೊಂದಿಗೆ ಮನೆಮನೆಗೆ ಸಂತೋಷ ಹಂಚುವ ಈ ಸಂಪ್ರದಾಯ ನಮ್ಮ ನಾಡಿನ ಜನಪದ ಪರಂಪರೆಯ ಅಮೂಲ್ಯ ಕೊಡುಗೆಯಾಗಿದೆ.

ನೇರ ಸಂದರ್ಶನ

ಪಾಂಡವ ನ್ಯೂಸ್, ಗದಗ : ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ವತಿಯಿಂದ ನವೆಂಬರ್ 18 ಬುಧವಾರರಂದು ಬೆಳಿಗ್ಗೆ 10–00 ಗಂಟೆಗೆ ನಗರದ ಉತ್ಸವಭವನ ಹತ್ತಿರ, ಹುಬ್ಬಳ್ಳಿ ರೋಡ ಮೀರ್ಸಾಕುಲಮ್ ಕಿಯಾ ಕಂಪನಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ. ನೇರ ಸಂದರ್ಶನದಲ್ಲಿ ಮೀರ್ಸಾಕುಲಮ್‌ಕಿಯಾ ಕಂಪನಿ ಭಾಗವಹಿಸಲಿದೆ. ಎಸ್.ಎಸ್.ಎಲ್.ಸಿ, ಪಿ.ಯು.ಸಿ ಐ.ಟಿ.ಐ, ಡಿಪ್ಲೋಮಾ ಹಾಗೂ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರಬೇಕು. ಸರ್ವಿಸ್ ಮ್ಯಾನೇಜರ್, ಸೇಲ್ಸ ಎಕ್ಸಿಕೂಟಿವ್, ಟೇಕ್ನೀಶಿಯನ, ಸರ್ವಿಸ್‌ಕನಸಲ್ಟಂಟ, ಪಾರ್ಟಸ್ ಮ್ಯಾನೇಜರ್, ಟೀಲಿ ಕಾರ್ಲಸ್, ಮಾರ್ಕೆಟಿಂಗ ಎಕ್ಸಿಕೂಟಿವ್, ಮ್ಯಾನೇಜರ್ಸ, ಡೆಂಟರ್, ಪೇಂಟ–ರ್, ರಿಸಪ್ಶನಿಸ್ಟ ಹುದ್ದೆಗಳು ಖಾಲಿ ಇವೆ. 18 ರಿಂದ 45 ವಯಸ್ಸು ಹೊಂದಿರಬೇಕು.ನೇರ ಸಂದರ್ಶನದಲ್ಲಿ ಪಾಲ್ಗೋಳುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ಝೆರಾಕ್ಸ್ ಪ್ರತಿಗಳು, 2 ರೆಸ್ಯೂಮೆ(ಬಯೋಡಾಟಾ)ಪ್ರತಿಗಳು, ಮತ್ತು ಆಧಾರಕಾರ್ಡ್ ಝೆರಾಕ್ಸ್‌ನೊಂದಿಗೆ ಭಾಗವಹಿಸಬಹುದು. ನೇರ ಸಂದರ್ಶನದಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿರುತ್ತದೆ. ಹಾಗೂ ಯುವನಿಧಿ ಯೋಜನೆಯ ಫಲಾನುಭವಿಗಳು ಈ ನೇರ ಸಂದರ್ಶನದಲ್ಲಿ ಕಡ್ಡಾಯವಾಗಿ ಪಾಲ್ಗೋಳಬೇಕು.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ, 8310111569, 8088562596, 6363330688 ಕ್ಕೆ ಸಂಪರ್ಕಿಸಲು ಕೋರಲಾಗಿದೆಯೆಂದು ಜಿಲ್ಲಾ ಉದ್ಯೋಗಾಧಿಕಾ–ರಿಯಾದ ಬಸವಂತ ಪಿ ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

111ನೇ ಸಂಸ್ಥಾಪಕರ ದಿನಾಚರಣೆಯಂದು ಶತಮಾನದ ಸೇವೆಯ ಸ್ಮರಣೆ

ಸಪ್ತರ್ಷಿಗಳ ತ್ಯಾಗದ ಫಲವಾಗಿ ಹೆಮ್ಮರವಾಗಿ ಬೆಳೆದ ಕೆ.ಎಲ್.ಇ. ಸಂಸ್ಥೆ

ಪಾಂಡವ ನ್ಯೂಸ್, ಹಾವೇರಿ ಶಿಕ್ಷಣದ ಮೂಲಕ ಸಮಾಜದ ಅಜ್ಞಾನ, ಅಸಮಾನತೆ ಮತ್ತು ಹಿಂದುಳಿದ ಪರಿಸ್ಥಿತಿಯನ್ನು ನಿವಾರಿಸಿ ಜ್ಞಾನದ ಬೆಳಕನ್ನು ಎಲ್ಲೆಡೆ ಪಸರಿಸಬೇಕೆಂಬ ಮಹೋನ್ನತ ಸಂಕಲ್ಪದೊಂದಿಗೆ ಆರಂಭಗೊಂಡ ಕೆ.ಎಲ್.ಇ. ಸಂಸ್ಥೆಯು ಇಂದು ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ದೇಶದ ಗಮನ ಸೆಳೆದ ಮಹತ್ವದ ಸಂಸ್ಥೆಯಾಗಿ ಬೆಳೆದು ನಿಂತಿದೆ. ಸಂಸ್ಥೆಯ ಈ ಅಭೂತಪೂರ್ವ ಬೆಳವಣಿಗೆಯ ಹಿಂದೆ ಸಂಸ್ಥಾಪಕ ಸಪ್ತರ್ಷಿಗಳ ತ್ಯಾಗ, ದಾನಿಗಳ ಔದಾರ್ಯ, ಶಿಕ್ಷಣಪ್ರೇಮಿಗಳ ಸಹಕಾರ, ದೂರದೃಷ್ಟಿಯ ನಾಯಕತ್ವದ ಸುದೀರ್ಘ ಇತಿಹಾಸವಿದೆ ಎಂದು ಧಾರವಾಡದ ಖ್ಯಾತ ಅಂತರ್‌ರಾಷ್ಟ್ರೀಯ ಹಿಂದೂಸ್ಥಾನಿ ಗಾಯಕ ಡಾ. ಮೃತ್ಯುಂಜಯ ಶೆಟ್ಟರ್ ಹೇಳಿದರು.

ಅವರು ನಗರದ ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಜರುಗಿದ ಕೆ.ಎಲ್.ಇ. ಸಂಸ್ಥೆಯ 111ನೇ ಸಂಸ್ಥಾಪಕರ ದಿನಾಚರಣೆಯಂದು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಕೆ.ಎಲ್.ಇ. ಸಂಸ್ಥೆಯ ಶತಮಾನದ ಶೈಕ್ಷಣಿಕ ಪಯಣವು ಕೇವಲ ಒಂದು ಶಿಕ್ಷಣ ಸಂಸ್ಥೆಯ ಬೆಳವಣಿಗೆಯ ಕಥೆಯಲ್ಲ; ಅದು ಶಿಕ್ಷಣದ ಮೂಲಕ ಸಮಾಜವನ್ನು ಕಟ್ಟುವ ಮಹತ್ಕಾರ್ಯದ ಯಶೋಗಾಥೆಯಾಗಿದೆ. ಸಂಸ್ಥಾಪಕರು ಅಂದು



ಕಂಡ ಕನಸು, ಅವರು ಹಾಕಿಕೊಟ್ಟ ಆದರ್ಶ ಮತ್ತು ಸೇವಾ ಮನೋಭಾವ ಇಂದು ಬೃಹತ್ ಶೈಕ್ಷಣಿಕ ಪರಂಪರೆಯಾಗಿ ಬೆಳೆದು ನಿಂತಿರುವುದು ಹೆಮ್ಮೆಯ ಸಂಗತಿಯಾಗಿದೆ. ಕಲೆ, ಸಂಸ್ಕೃತಿ, ಶಿಕ್ಷಣ ಮತ್ತು ಮಾನವೀಯ ಮೌಲ್ಯಗಳ ಪೋಷಣೆಯೂ ಸಮಾಜದ ಪ್ರಗತಿಗೆ ಅಗತ್ಯವಾಗಿದ್ದು, ಇಂತಹ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯ ನಿರಂತರವಾಗಿ ನಡೆಯಬೇಕಿದೆ. 1916ರ ನವೆಂಬರ್ 13ರಂದು ಬೆಳಗಾವಿಯಲ್ಲಿ ಒಂದು ಆಂಗ್ಲೋ–ವೆರ್ನಾಕ್ಯುಲರ್ ಶಾಲೆಯ ಸ್ಥಾಪನೆಯೊಂದಿಗೆ ಆರಂಭವಾದ ಈ ಶೈಕ್ಷಣಿಕ ಆಂದೋಲನದ ಹಿಂದೆ ಉತ್ತರ ಕರ್ನಾಟಕದ ಗ್ರಾಮೀಣ ಜನರಿಗೆ ಶಿಕ್ಷಣ ದೊರಕಿಸಬೇಕೆಂಬ ಉದಾತ್ತ ಆಶಯವಿತ್ತು. ಆ ಕಾಲದಲ್ಲಿ ಶಿಕ್ಷಣದಿಂದ ವಂಚಿತರಾಗಿದ್ದ ಜನಸಮುದಾಯಕ್ಕೆ ಜ್ಞಾನದ ಬಾಗಿಲು ತೆರೆಯಬೇಕೆಂಬ ಉದ್ದೇಶದಿಂದ ದಾನಿಗಳ ಸಹಕಾರಗಳೊಂದಿಗೆ ಸಪ್ತರ್ಷಿಗಳು ತಮ್ಮ ಬದುಕನ್ನೇ ಶಿಕ್ಷಣ ಸೇವೆಗೆ ಸಮರ್ಪಿಸಿಕೊಂಡಿದ್ದರು. ಅವರ ನಿಸ್ವಾರ್ಥ–ರ್ ಪರಿಶ್ರಮ, ಸಂಕಲ್ಪಶಕ್ತಿ ಮತ್ತು ತ್ಯಾಗದ ಫಲವಾಗಿ ಸಣ್ಣದಾಗಿ ಆರಂಭಗೊಂಡ ಸಂಸ್ಥೆ ಇಂದು ಶಿಕ್ಷಣ, ವೈದ್ಯಕೀಯ, ತಾಂತ್ರಿಕ, ಕೃಷಿ, ಸಂಶೋಧನೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ ಎಂದರು. ಕಾಲೇಜಿನ ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಡಾ. ಎಸ್. ಎಲ್. ಬಾಲೇಹೊಸೂರ ಅವರು ಕೆ.ಎಲ್.ಇ. ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ, ಸಪ್ತರ್ಷಿಗಳ ದೂರದೃಷ್ಟಿ ಹಾಗೂ ಸಂಸ್ಥೆಯ ಬೆಳವಣಿಗೆಯ ವಿವಿಧ ಮಜಲುಗಳನ್ನು ವಿವರಿಸಿದರು. ವೇದಿಕೆಯಲ್ಲಿ ಕಾಲೇಜಿನ ಸ್ಥಾನಿಕ ಆಡಳಿತ ಮಂಡಳಿ ಸದಸ್ಯರಾದ ಸಿ. ಬಿ. ಹಿರೇಮಠ, ಜೆ. ಎಸ್. ಅರಣಿ, ಬಸವರಾಜ ಮಾಸೂರ ಹಾಗೂ ಬಿಸಿಎ ಪ್ರಾಚಾರ್ಯ ಪ್ರೊ. ವೆಂಕಟೇಶ ಕಲಾಲ, ನಿವೃತ್ತ ಪ್ರಾಚಾರ್ಯ ಡಾ. ಬಿ. ಸಿ. ಬನ್ನೂರು ಉಪಸ್ಥಿತರಿದ್ದರು. ಪವಿತ್ರ ಕಟ್ಟೀಮನಿ ಪ್ರಾರ್ಥನೆ ಹಾಡಿದರು. ಪದವಿ ಪ್ರಾಚಾರ್ಯ ಡಾ. ಸಿದ್ಧೇಶ್ ಎಂ. ಬಿ. ಸ್ವಾಗತಿಸಿದರು. ಸಾಂಸ್ಕೃತಿಕ ವೇದಿಕೆಯ ಕಾರ್ಯಾಧ್ಯಕ್ಷೆ ಡಾ. ಎಂ. ಪಿ. ಕಣವಿ ಅತಿಥಿಗಳನ್ನು ಪರಿಚಯಿಸಿದರು. ಪ್ರೊ. ಸಿದ್ಧೇಶ್ವರ ಹುಣಸೀಕಟ್ಟಿಮಠ ನಿರ್ವಹಿಸಿದರು. ಪದವಿಪೂರ್ವ ಪ್ರಾಚಾರ್ಯ ಪ್ರೊ. ವೇಣುಗೋಪಾಲ ಎಚ್. ಆರ್. ವಂದಿಸಿದರು.

ಕಾರ್ಯಕ್ರಮದ ವಿಶೇಷವಾಗಿ ಕೆ.ಎಲ್.ಇ. ಸಂಸ್ಥೆಯ ಸಂಸ್ಥಾಪಕ ಸಪ್ತರ್ಷಿಗಳು ಹಾಗೂ ಸಂಸ್ಥೆಯ ಬೆಳವಣಿಗೆಗೆ ಉದಾರವಾಗಿ ದೇಣಿಗೆ ನೀಡಿ ಸಹಕರಿಸಿದ ದಾನಿಗಳ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಗೌರವಪೂರ್ವಕವಾಗಿ ಪೂಜೆ ನೆರವೇರಿಸಲಾಯಿತು. ಸಂಸ್ಥೆಯ ಉದಯಕ್ಕೆ ಕಾರಣರಾದ ಮಹನೀಯರ ತ್ಯಾಗ ಮತ್ತು ಸೇವೆಯನ್ನು ಸ್ಮರಿಸುವ ಮೂಲಕ ಅವರ ಆದರ್ಶಗಳನ್ನು ಮುಂದುವರಿಸಿಕೊಂಡು ಹೋಗುವ ಕೃತಜ್ಞತಾ ಭಾವವನ್ನು ವ್ಯಕ್ತಪಡಿಸಲಾಯಿತು.

ಮಕ್ಕಳಲ್ಲಿ ಅಪಾರ ಪ್ರತಿಭೆ, ಸಾಧಿಸುವ ಛಲವಿದೆ: ಶಿವಲೀಲಾ ಕುರುವತ್ತಿ

ಪಾಂಡವ ನ್ಯೂಸ್, ರಾಣೆಬೆನ್ನೂರು: ಮಕ್ಕಳ ಮುಖದಲ್ಲಿನ ನಗು, ಸಂಭ್ರಮದ ಚಿಲುಮೆ, ಶಿಕ್ಷಕಿಯರ ಸಾಂಸ್ಕೃತಿಕ ಪ್ರದರ್ಶನ ಹಾಗೂ ವಿದ್ಯಾರ್ಥಿಗಳ ಆಹಾರ ಮೇಳದ ಉತ್ಸಾಹದ ನಡುವೆ ನಗರದ ನ್ಯಾಶನಲ್ ಪಬ್ಲಿಕ್ ಶಾಲೆಯಲ್ಲಿ ಮಕ್ಕಳ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚ–ರಿಸಲಾಯಿತು.

ಮಕ್ಕಳ ದಿನಾಚರಣೆಯ ಅಂಗವಾಗಿ ಶಾಲೆಯಲ್ಲಿ ವಿವಿಧ ಮನರಂಜನಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಮತ್ತು ಶಿಕ್ಷಕಿಯರು ಪರಸ್ಪರ ಸಂಭ್ರಮ ಹಂಚಿಕೊಳ್ಳುವ ಮೂಲಕ ಇಡೀ ಶಾಲಾ ಆವರಣದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಚಾರ್ಯೆ ಶಿವಲೀಲಾ ಕುರುವತ್ತಿ ಮಾತನಾಡಿ, ಮಕ್ಕಳು ದೇಶದ ಭವಿಷ್ಯದ ಪ್ರಜೆಗಳು. ಅವರಲ್ಲಿ ಅಪಾರವಾದ ಶಕ್ತಿ, ಪ್ರತಿಭೆ ಹಾಗೂ ಸಾಧಿಸುವ ಛಲ ಅಡಗಿದೆ. ಪ್ರತಿಯೊಂದು ಮಗುವಿನಲ್ಲಿಯೂ ಒಂದೊಂದು ವಿಶೇಷ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ ಸೂಕ್ತ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ನೀಡಿದಾಗ ಮಕ್ಕಳು ಜೀವನದಲ್ಲಿ ಉತ್ತಮ ಸಾಧನೆ ಮಾಡ